ಕರ್ನಾಟಕ ಲಲಿತಕಲಾ ಅಕಾಡೆಮಿ

ಎಚ್.ಎಸ್. ಇನಾಮತಿ

H.S. Inamti



ಎಲ್. ಶಿವಲಿಂಗಪ್ಪ

L. Shivalingappa

ಎಚ್.ಎಸ್. ಇನಾಮತಿ

H.S. Inamti

ಪೀಟರ್ ಲೂಯಿಸ್

ಪ್ರಧಾನ ಸಂಪಾದಕರು

ಎಲ್. ಶಿವಲಿಂಗಪ್ಪ

ಲೇಖಕರು

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨


H.S. Inamti - A monograph by Sri L. Shivalingappa; Principal, Kalavidyalaya, Basavanagara, Bangalore-560 037 and Published by Shri B.T. Munirajaiah, Registrar, Karnataka Lalithakala Academy, Kannada Bhavana, J.C. Road, Bangalore - 560 002. Tel: 080-22480297

First Edition: 2004

Condensed and translated by U.S. Venkataraman.

Pages: 48+8

Price: **Rs. 40/-**



ಮುಖಚಿತ್ರ: ಎಚ್.ಎಸ್. ಇನಾಮತಿ ಅವರ 'ಯಂಗ್ ಪೈಂಟರ್' ಕಲಾಕೃತಿ
ವಿನ್ಯಾಸ: ಶ್ರೀ ಸುಧಾಕರ ದರ್ಬೆ

ಮುದ್ರಕರು: ಪರಿಶ್ರೀ ಪ್ರಿಂಟರ್ಸ್
100/3, ನಾಗಪ್ಪ ಸ್ಟ್ರೀಟ್, ಪ್ಯಾಲೇಸ್ ಗುಟ್ಟಹಳ್ಳಿ
ಬೆಂಗಳೂರು - 560 003, ದೂರವಾಣಿ: 080-23368286

ಅಧ್ಯಕ್ಷರ ಮಾತು

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ ರೂಪಿಸಿ, ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿರುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳ ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್', 'ನಿಮ್ಮೊಂದಿಗೆ ನಾವು', 'ಮನೆಗೊಂದು ಕಲಾಕೃತಿ', 'ಜನಪದ ಕೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಚಿತ್ರದುರ್ಗದ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ. ಎಸ್. ದಂಡಾವತಿಮಠ ಹಾಗೂ ಡಾ|| ಎಂ.ವಿ. ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫಾಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡಿದ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕಾಡುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹತ್ತು ಹಲವು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯೂ ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ **'ಕಲಾವಾರ್ತೆ'** ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. **ಕಲಾವಿದರ ಮಾಲಿಕೆಯಲ್ಲಿ** ಒಂಬತ್ತು ಜನ ಹಿರಿಯ ಕಲಾವಿದರಾದ ಕೆ. ಕೇಶವಯ್ಯ, ಎಸ್. ಕಾಳಪ್ಪ, ಎಚ್.ಎಸ್. ಇನಾಮತಿ, ರಘೋತ್ತಮ ಪುಟ್ಟಿ, ವ್ಹಿ.ಟಿ. ಕಾಳೆ, ಪುರುಷೋತ್ತಮ ಕಾರಂತ, ಎಂ.ಆರ್. ಬಾಳೀಕಾಯಿ, ವ್ಹಿ.ಜಿ. ಅಂದಾನಿ ಹಾಗೂ ಸಿ. ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು, ಆಯಾ ಲೇಖಕರು ಈ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಅದನ್ನು ಸಂಪಾದಿಸಿಕೊಟ್ಟ ಡಾ|| ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲನೋಟವನ್ನು ಒಂದೆಡೆಗೆ ತರುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು, ಅದಕ್ಕೆ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. **ಜನಪ್ರಿಯ ಕಲಾಮಾಲೆಯ** ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನಲೆಯಲ್ಲಿ ಪರಿಚಯಿಸುವ ಹತ್ತು ಪುಸ್ತಕಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ. ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟ ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ|| ಎಸ್.ಸಿ. ಪಾಟೀಲರು. ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಅಕಾಡೆಮಿಯ ಇನ್ನೊಂದು ಗ್ರಂಥ ಭಾವಚಿತ್ರ ಪರಂಪರೆಯ **'ಮುಖಗಳೊಂದಿಗೆ ಮುಖಾಮುಖಿ'** ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದುಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ.ವಿ. ಸುಬ್ರಹ್ಮಣ್ಯಂ ರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು. ಇದಲ್ಲದೆ ಇಪ್ಪತ್ತು ಹಿರಿಯ-ಕಿರಿಯ ಕಲಾವಿದರ ಕಲಾಕೃತಿಗಳ ಚಿತ್ರಸಂಪುಟವೊಂದು ಅಕಾಡೆಮಿ ಸದಸ್ಯ ಶ್ರೀ ಪ.ಸ. ಕುಮಾರ್ ಅವರ ಸಂಪಾದಕತ್ವದಲ್ಲಿ ಬರುತ್ತಿದೆ.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ವಾರ್ಷಿಕ ವರದಿಯಲ್ಲಿ ನೀಡುತ್ತಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫಾಕ್ಸ್ ಸಂಸ್ಥೆಗಳಿಗೆ ನಮ್ಮ ವಂದನೆಗಳು.

ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಶೇಷವಾಗಿ ಸಮನ್ವಯಕಾರರಾಗಿ ಹಲವಾರು ಕಾರ್ಯಕ್ರಮಗಳನ್ನು ಆಗುಮಾಡಿದ ಸದಸ್ಯ ಶ್ರೀ ಪ.ಸ.ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿ ವರ್ಗದ ರಾಜು, ವೆಂಕಟೇಶ್, ಗಂಗಾಧರ, ಮುತ್ತು, ಬಾಲು, ಲೋಕೇಶ ಮತ್ತು ಅರವಿಂದ ಅವರುಗಳಿಗೆ ಹಾಗೂ ಪ್ರತ್ಯಕ್ಷ, ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು.

ನಮ್ಮ ಈ ಕಿರು ಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಪೀಟರ್ ಲೂಯಿಸ್



ಎಚ್.ಎಸ್. ಇನಾಮತಿ / H.S. Inamti

1906 - 1986

ಲೇಖಕರ ನುಡಿ

ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಹಿರಿಯ ಕಲಾವಿದರ ಜನ್ಮಶತಾಬ್ಧಿ ಆಚರಿಸಬೇಕೆಂಬ ಸದುದ್ದೇಶದಿಂದ ಧಾರವಾಡದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿತ್ತು (೨೨.೯.೨೦೦೩). ತತ್ಸಂಬಂಧವಾದ ಆಹ್ವಾನ ಪತ್ರಿಕೆ ಬಂದಾಗ ನನಗೆ ಅತ್ಯಾಶ್ಚರ್ಯವಾದದ್ದು ದಂಡಾವತಿ ಮಠ, ಡಾ|| ಎಂ.ವಿ. ಮಿಣಜಿಗಿ, ಡಿ.ಜಿ. ಬಡಿಗೇರ, ರೂಪಶಿಲ್ಪಿ ಬಸವಯ್ಯ, ಕಮಡೋಳಿ, ಶಿವಾನಂದ ಪಿ. ಅಕ್ಕಿ ಇವರುಗಳ ಸಾಲಿನಲ್ಲಿ ಎಚ್.ಎಸ್. ಇನಾಮತಿಯವರ ಹೆಸರನ್ನು ಸೇರಿಸಿದ್ದು. ಇನಾಮತಿಯವರು ಹುಟ್ಟಿದ್ದು ೧೯೦೬ರಲ್ಲಿ. ಆದರೆ ಯಾವುದೋ ಮಾಹಿತಿ ಅನ್ವಯ ೧೯೦೦ ಎಂದು ಪರಿಗಣಿಸಿ ಜನ್ಮ ಶತಾಬ್ಧಿಯನ್ನು ಆಚರಿಸಲು ಸಿದ್ಧತೆ ನಡೆಸಿತ್ತು. ನನಗೆ ಆಹ್ವಾನ ಪತ್ರಿಕೆ ತಲುಪಿದ್ದು ಕಾರ್ಯಕ್ರಮದ ದಿನದಂದು. ಹೀಗಾಗಿ ಇಲಾಖೆಗೆ ಮತ್ತು ಕಲಾಸಕ್ತರಿಗೆ ಈ ವ್ಯತ್ಯಯ ತಿಳಿಸುವುದಾದರೂ ಹೇಗೆಂದು ಚಿಂತಿಸಿ ನಾನು ಉದಯವಾಣಿ ಪತ್ರಿಕೆಗೆ 'ನಮ್ಮ ಕಲಾವಿದರು' ಎಂಬ ಅಂಕಣದಲ್ಲಿ (ಪ್ರತಿ ಮಂಗಳವಾರ ಪ್ರಕಟವಾಗುತ್ತದೆ) 'ಮುಂಚಿತವಾಗಿ ಜನ್ಮ ಶತಾಬ್ಧಿ ಆಚರಿಸಿಕೊಂಡ ಕಲಾವಿದ' ಎಂಬ ಶೀರ್ಷಿಕೆಯಲ್ಲಿ ಲೇಖನ ಬರೆದೆ (೯.೧೨.೨೦೦೩).

ಇನಾಮತಿಯವರ ಬಗ್ಗೆ ಏನಾದರೂ ವಿಷಯ ಬರೆಯಬೇಕಾದಲ್ಲಿ ಇದ್ದದ್ದು ಕೇವಲ ಒಂದೆರಡು ಪುಟಗಳಷ್ಟು ಮಾತ್ರ. ಅದೂ ಅಂಕಿ ಅಂಶರಹಿತವಾಗಿ. ಕಲಾಕೃತಿಗಳ ಛಾಯಾಚಿತ್ರಗಳಂತೂ ಎರಡು ಮೂರು ಮಾತ್ರ. ಅವೇ ಮತ್ತೆ ಮತ್ತೆ ಮುದ್ರಣವಾಗುತ್ತಿದ್ದವು. ಇದಕ್ಕಿಂತ ಹೊರತಾದ ವಿಷಯ ಯಾರು ಸಂಗ್ರಹಿಸಿರಲಿಲ್ಲ. ಬೇರೆಲ್ಲಿಯೂ ಪ್ರಕಟವಾಗಿರಲಿಲ್ಲ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು ಮಾಹಿತಿ ಸಂಗ್ರಹಿಸುತ್ತಿದ್ದೆ. ಅದೇ ವೇಳೆಗೆ ಲಲಿತಕಲಾ ಅಕಾಡೆಮಿಯಿಂದ ಒಂದು ಆದೇಶ ಬಂತು. ಇನಾಮತಿಯವರ ಬಗ್ಗೆ ಪರಿಚಯ ಪುಸ್ತಕ ಪ್ರಕಟಿಸಲು ಯೋಜಿಸಿದೆ, ನೀವು ಛಾಯಾಚಿತ್ರಗಳ ಸಹಿತ ಪರಿಪೂರ್ಣ ಮಾಹಿತಿ ಸಂಗ್ರಹಿಸಿ ಬರೆದು ಕೊಡಬೇಕೆಂದು ತಿಳಿಸಿತ್ತು.


ನನಗೆ ಈ ಪತ್ರ ಆಶ್ಚರ್ಯತರುವುದರ ಜೊತೆಗೆ ಪೂರ್ಣ ವಿಷಯ ಸಂಗ್ರಹಿಸುವುದಕ್ಕೆ ಒಂದು ಕಾರಣವಾಯಿತೆಂದು ಪುಸ್ತಕ ರಚಿಸಲು ಒಪ್ಪಿಕೊಂಡೆ.

ಇನಾಮತಿಯವರ ಕಲಾಬದುಕಿನ ಉತ್ತರಾರ್ಧ ನನಗೆ ತಿಳಿದಿತ್ತು. ಕಾರಣ ಅವರು ಕಟ್ಟಿ ಬೆಳೆಸಿದ ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ತು ಸಂಸ್ಥೆಯಲ್ಲಿ ಸದಸ್ಯನಾಗಿ, ನಂತರ ಸಹಕಾರ್ಯದರ್ಶಿಯಾಗಿ ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ್ದೆ. ಆದರೆ ಅವರ ಪೂರ್ವಾರ್ಧ ತಿಳಿದಿರಲಿಲ್ಲ. ಈ ಕೊರತೆಯನ್ನು ತುಂಬಿಕೊಟ್ಟವರು ಇನಾಮತಿಯವರ ಆಪ್ತ ಸ್ನೇಹಿತರು, ಪತ್ರಿಕಾಕರ್ತರು, ವೇದ ವಿದ್ವಾಂಸರು ಆದ ಶ್ರೀ ಬಿ. ಶ್ರೀನಿವಾಸಮೂರ್ತಿ ಅವರು. ಈ ಅಂಶಗಳೆಲ್ಲವೂ ಅವರು ಬೆಂಗಳೂರಿಗೆ ಬಂದು ನೆಲೆಸಿದ ನಂತರದವು. ಅದಕ್ಕಿಂತ ಪೂರ್ವದ ವಿಷಯಗಳಾದ ವಿದ್ಯಾಭ್ಯಾಸ, ಎಲ್ಲೆಲ್ಲಿ ಇದ್ದು ಬಂದರೆಂಬುದು, ಬಾಲ್ಯ, ಯೌವ್ವನದ ಘಟ್ಟಗಳನ್ನು ತಿಳಿಸಿ, ಕಲಾಕೃತಿಗಳ ಛಾಯಾಚಿತ್ರಗಳನ್ನು ಕೊಟ್ಟು ಸಹಕರಿಸಿದವರು ಇನಾಮತಿ ಅವರ ಅಳಿಯ ಶ್ರೀ ಸುಬ್ಬಣ್ಣನವರು ಮತ್ತು ಅವರ ಮಕ್ಕಳು. ಈ ಎಲ್ಲಾ ಹಿನ್ನೆಲೆಯಲ್ಲಿ ಪುಸ್ತಕ ಬರೆಯಲು ಸಹಕಾರಿಯಾಯಿತು. ಇವರಿಗೆ ನನ್ನ ಕೃತಜ್ಞತೆಗಳು.

ಇದನ್ನು ಇಂಗ್ಲೀಷಿಗೆ ಅನುವಾದ ಮಾಡಿಕೊಟ್ಟವರು ಶ್ರೀ ಯು.ಎಸ್. ವೆಂಕಟರಾಮನ್ ಅವರು. ಶ್ರೀಯುತರು ಸಹ ಇನಾಮತಿಯವರ ಮಾರ್ಗದರ್ಶನದಲ್ಲಿ ಮಹಾಪರಿಷತ್ತಿನ ಕಾರ್ಯದರ್ಶಿಯಾಗಿದ್ದವರು. ಹಾಗಾಗಿ ಲೇಖನಕ್ಕೆ ಮತ್ತಷ್ಟು ಮಹತ್ವ ಬಂದಿದೆ. ತಮ್ಮ ಅವರ ನಡುವಿನ ಬಾಂಧವ್ಯವನ್ನು ತಮ್ಮ ಇಂಗ್ಲೀಷ್ ಅನುವಾದದಲ್ಲಿ ಕೆಲವುಕಡೆ ಅಡಕಗೊಳಿಸಿದ್ದಾರೆ. ಇನ್ನು ಈ ಪುಸ್ತಕ ಬರೆಯುವ ಸಂದರ್ಭದಲ್ಲಿ ಅನೇಕ ಸಲಹೆಗಳನ್ನು ನೀಡಿ ಮಾರ್ಗದರ್ಶನ ಮಾಡಿದವರು ಡಾ|| ಅ.ಲ. ನರಸಿಂಹನ್ ಅವರು. ಅವರಿಗೂ ಹಾಗೂ ಬರೆಯಲು ಅವಕಾಶ ಮಾಡಿಕೊಟ್ಟ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಲೂಯಿಸ್, ರಿಜಿಸ್ಟಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸದಸ್ಯರುಗಳೆಲ್ಲರಿಗೂ ಜೊತೆಗೆ ಇನಾಮತಿಯವರ ಕಲಾಕೃತಿಗಳ ಛಾಯಾಚಿತ್ರ ಬಳಸಿಕೊಳ್ಳಲು ಅನುಮತಿ ನೀಡಿದ ಮೈಸೂರಿನ ಜಗನ್ಮೋಹನ ಪ್ಯಾಲೆಸ್ ಅಧಿಕಾರಿಗಳು ಹಾಗೂ ಬೆಂಗಳೂರಿನ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್‌ನವರಿಗೂ ನನ್ನ ಅನಂತ ವಂದನೆಗಳು.

ಎಲ್. ಶಿವಲಿಂಗಪ್ಪ

ಎಲ್. ಶಿವಲಿಂಗಪ್ಪ



ಮೈಸೂರಿನಲ್ಲಿ ೧೯೪೭ರಲ್ಲಿ ಜನಿಸಿದ ಶ್ರೀ ಎಲ್. ಶಿವಲಿಂಗಪ್ಪ ಅವರು ಮೈಸೂರು ಅರಮನೆಯ ಖ್ಯಾತ ಕಲಾವಿದ ಶ್ರೀ ಶಿಲ್ಪ ಸಿದ್ಧಾಂತಿ ಸಿದ್ಧಲಿಂಗಸ್ವಾಮಿ ಅವರಿಂದಲೇ ಪ್ರಾಥಮಿಕ ಹಂತದ ಚಿತ್ರಕಲಾಭ್ಯಾಸ ಮಾಡಿದವರು. ೧೯೬೬ರಲ್ಲಿ ಬೆಂಗಳೂರಿಗೆ ಬಂದ ನಂತರ ಶ್ರೀ ಎಂ.ಟಿ.ವಿ. ಆಚಾರ್ಯರ ಕಲಾಶಾಲೆಯಲ್ಲಿ ಕ್ರಮಬದ್ಧ ಶಿಕ್ಷಣ ಹಾಗೂ ಪದವಿಯನ್ನು ಪಡೆದರು. ಚಿತ್ರ-ಶಿಲ್ಪ ಎರಡೂ ಕ್ಷೇತ್ರಗಳಲ್ಲಿ ಹಲವಾರು ಪ್ರಯೋಗ ಮಾಡಿರುವ ಶ್ರೀಯುತರು ನಾಲ್ಕು ಏಕವ್ಯಕ್ತಿ ಪ್ರದರ್ಶನಗಳಲ್ಲದೆ ಹಲವಾರು ಗುಂಪು ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ೧೯೯೭-೨೦೦೦ದಲ್ಲಿ ಶಿಲ್ಪಕಲಾ ಅಕಾಡೆಮಿಯ ಸದಸ್ಯರಾಗಿದ್ದ ಶ್ರೀ ಶಿವಲಿಂಗಪ್ಪ ಅವರು ಮರಳಚ್ಚಿನಲ್ಲಿ (sand cast) ಹಾಗೂ ಥರ್ಮೋಕೋಲ್‌ಗಳಲ್ಲಿ ಶಿಲ್ಪ ರಚಿಸುವ ಬಗ್ಗೆ ಹಲವಾರು ಯಶಸ್ವೀ ಪ್ರಯೋಗಗಳನ್ನು ಮಾಡಿದ್ದಾರೆ. ಅಂತೆಯೇ ಬೆಂಗಳೂರಿನ ಶಿಲ್ಪಕಲಾಮೇಳವೂ ಸೇರಿದಂತೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕಲಾಶಿಬಿರಗಳಲ್ಲೂ ಭಾಗವಹಿಸಿದ್ದಾರೆ. ಕಲಾಪರವಾದ ಸಂಘ ಸಂಸ್ಥೆಗಳಲ್ಲಿ, ಆಯ್ಕೆ ಸಮಿತಿಗಳಲ್ಲಿ, ಪಠ್ಯವಸ್ತು, ಪಠ್ಯವಿಷಯಗಳ ಸಮಿತಿಗಳಲ್ಲಿ ಸಕ್ರಿಯ ಸದಸ್ಯರಾಗಿದ್ದಾರೆ.

ಎಂ.ಟಿ.ವಿ. ಆಚಾರ್ಯರ ಮೆಚ್ಚಿನ ಶಿಷ್ಯರಾಗಿ ಚಿತ್ರಕಲಾ ಭವನದ ಬೆಳವಣಿಗೆಯಲ್ಲಿ ಸಕ್ರಿಯ ಪಾತ್ರವಹಿಸಿದ್ದ ಇವರು ಆಚಾರ್ಯರ ಕಾಲಾನಂತರದಲ್ಲಿ ಕಲಾಶಾಲೆಯ ಪೂರ್ಣ ಜವಾಬ್ದಾರಿ ಹೊತ್ತಿರುವರಲ್ಲದೆ, ಕಲಾಗುರು ಎಂ.ಟಿ.ವಿ. ಆಚಾರ್ಯ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಿ, ರಾಜ್ಯದ ಹಿರಿಯ ಕಲಾವಿದರನ್ನು ಗುರುತಿಸಿ ಗೌರವಿಸುತ್ತಿದ್ದಾರೆ.

ಸ್ವತಃ ಛಾಯಾಗ್ರಾಹಕರಾಗಿದ್ದು ಚಿತ್ರಕಲೆ, ಶಿಲ್ಪಕಲೆಗಳನ್ನು ಕುರಿತು ಹಲವಾರು ಲೇಖನಗಳನ್ನು ಪತ್ರಿಕೆಗಳಿಗೆ ಬರೆದಿರುವುದಲ್ಲದೆ, ಶಿಲ್ಪಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮತ್ತು ನಾಗೇಂದ್ರಸ್ಥಪತಿಯವರನ್ನು ಕುರಿತ ಪುಸ್ತಕಗಳು ಪ್ರಕಟಗೊಂಡಿವೆ. ದೂರದರ್ಶನ, ಆಕಾಶವಾಣಿ ಹಾಗೂ ನಿಯತಕಾಲಿಕೆ, ಪತ್ರಿಕೆಗಳಂತಹ ಮಾಧ್ಯಮಗಳಲ್ಲಿ ಸಂದರ್ಶನ, ಚಿತ್ರಶಿಲ್ಪಗಳ ಪರಿಚಯ, ವಿಮರ್ಶೆ ಕುರಿತಂತೆ ನೂರಾರು ಲೇಖನಗಳು ಪ್ರಕಟಗೊಂಡಿವೆ. 'ಉದಯವಾಣಿ' ಪತ್ರಿಕೆಯಲ್ಲಿ ಕಲೆ-ಕಲಾವಿದರನ್ನು ಕುರಿತು ನಿಯಮಿತವಾಗಿ ಪರಿಚಯಿಸುತ್ತಿದ್ದಾರೆ. ಪ್ರಸ್ತುತ ಕಲಾವಿದರ ಮಾಲಿಕೆಗಾಗಿ ಶ್ರೀ ಎಸ್. ಕಾಳಪ್ಪ ಹಾಗೂ ಶ್ರೀ ಎಚ್.ಎಸ್. ಇನಾಮತಿಯವರ ಬಗ್ಗೆ ಪುಸ್ತಕ ರಚಿಸಿಕೊಟ್ಟಿದ್ದಾರೆ.

ಎಚ್.ಎಸ್. ಇನಾಮತಿ

ನಮ್ಮ ಪೂರ್ವದ ಕವಿಗಳು, ಕಲಾವಿದರು, ಶಿಲ್ಪಿಗಳು ಯಾರೂ ತಮ್ಮಲ್ಲಿರುವ ಕಲಾಪ್ರತಿಭೆಯನ್ನು ಪ್ರಚಾರಗೊಳಿಸುತ್ತಿರಲಿಲ್ಲ. ದೇವರು ಕೊಟ್ಟಿರುವ ವಿದ್ಯೆ, ಅವನು ಬರೆಸಿದಂತೆ ನಾ ಬರೆಯುವೆ, ನನ್ನದೇನೂ ಇಲ್ಲ ಎಂಬ ದೈವೀಭಾವನೆ ಅವರಲ್ಲಿರುತ್ತಿತ್ತು. ದೇವರು ಕೊಟ್ಟ ವಿದ್ಯೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ನಮ್ಮ ಮುಂದಿನ ತಲೆಮಾರಿಗೆ ಹಿಂದಿನವರು ಏನು ಮಾಡಿದರು ಅಥವಾ ಏನು ಮಾಡಬೇಕಾಗಿತ್ತು, ಎಲ್ಲಿದ್ದರು, ಹೇಗಿದ್ದರು ಎಂಬ ಸಾಮಾನ್ಯ ತಿಳುವಳಿಕೆಗಾದರೂ ಅವರುಗಳ ಸ್ಥೂಲ ವಿವರ ಬೇಕಾಗುತ್ತಿತ್ತು ಎಂಬ ವಿಚಾರವನ್ನು ನಮ್ಮ ಪೂರ್ವಿಕರಲ್ಲಿ ಕೆಲವರು ವಿಚಾರ ಮಾಡದೇ ಹೋದದ್ದು ಕಲಾಚರಿತ್ರೆಯ ದೃಷ್ಟಿಯಿಂದ ಬಹುದೊಡ್ಡ ನಷ್ಟವೇ ಸರಿ.

ಎಚ್.ಎಸ್. ಇನಾಮತಿಯವರ ಪೂರ್ವಿಕರು ಸುಮಾರು ೧೭-೧೮ನೇ ಶತಮಾನದಲ್ಲಿ ಮಹಾರಾಷ್ಟ್ರ ಕಡೆಯಿಂದ ಬಂದವರು. ಮಾತೃಭಾಷೆ ಮರಾಠಿಯಾದರೂ ಇನಾಮತಿಯವರ ಕಾಲಕ್ಕೆ ಅವರ ಮನೆ ವಾತಾವರಣ ಕನ್ನಡಮಯವಾಗಿತ್ತು. ಇವರ ತಂದೆ ಬಿ.ಐ. ಶ್ಯಾಮರಾವ್ ಅರಣ್ಯ ಇಲಾಖೆಯಲ್ಲಿ ಅಧಿಕಾರಿಯಾಗಿದ್ದುದರಿಂದ ಸರ್ಕಾರ ನೇಮಿಸಿದ ಸ್ಥಳಗಳಿಗೆ ಹೋಗಬೇಕಾದ ಅನಿವಾರ್ಯತೆ. ಶ್ಯಾಮರಾವ್ ಅವರದು ಸುಸಂಸ್ಕೃತ ಮನೆತನ. ಮೂರುಜನ ಗಂಡುಮಕ್ಕಳು. ಕಿರಿಯವರೇ ಹರಿರಾವ್ ಶ್ಯಾಮರಾವ್ ಇನಾಮತಿ (ಎಚ್.ಎಸ್. ಇನಾಮತಿ). ಹುಟ್ಟಿದ್ದು ಜಬ್ಬಲ್‌ಪುರದಲ್ಲಿ (೧೪.೪.೧೯೦೭). 'ಇನಾಮತಿ' ಎಂಬುದು ಮನೆತನದ ಹೆಸರಾದರೂ ಹರಿರಾವ್ ಎಂಬುದನ್ನು ಬಿಟ್ಟು ಇನಾಮತಿ ಎಂಬ ಹೆಸರಿನಿಂದಲೇ ಜನ ಗುರುತಿಸುತ್ತಿದ್ದರು. ತಾಯಿ ಗಂಗೂಬಾಯಿ ಅವರಿಗೆ ಇನಾಮತಿಯವರನ್ನು ಕಂಡರೆ ತುಂಬಾಪ್ರೀತಿ. ಇವರ ಹಿರಿಯ ಅಣ್ಣ ಮಾಧವರಾವ್ ಅವರು ಸುಪ್ರಸಿದ್ಧ ಇಂಜಿನಿಯರ್ ಆಗಿದ್ದರು. ಎರಡನೇ ಅಣ್ಣ ಬಿ.ಐ. ಗೋಪಾಲರಾವ್ ದಾವಣಗೆರೆಯಲ್ಲಿ ಜನಪ್ರಿಯ ವೈದ್ಯರಾಗಿದ್ದರು. ಇವರು ವಾರಕ್ಕೊಮ್ಮೆ ಉಚಿತ ವೈದ್ಯಕೀಯ ಪರೀಕ್ಷೆ ನಡೆಸುತ್ತಿದ್ದರು. ಜೊತೆಗೆ ಅಲ್ಲಿನ ನಗರ ಸಭೆಯ ಅಧ್ಯಕ್ಷರಾಗಿದ್ದರು. ಧಾರ್ಮಿಕ ಕಾರ್ಯದಲ್ಲಿ ಸಹ ಬಹಳ ಮುಂದು. ಇರುವಾಗಲೇ ಏನಾದರೂ ಉತ್ತಮ ಕಾರ್ಯಮಾಡಬೇಕೆಂಬ ತವಕವಾದ್ದರಿಂದ ದಾವಣಗೆರೆಯಲ್ಲಿ ಶ್ರೀರಾಘವೇಂದ್ರಸ್ವಾಮಿ ಮಠ ಮತ್ತು ಛತ್ರ ಸಹ ಕಟ್ಟಿಸಿದ್ದರು.

ಇನಾಮತಿಯವರಿಗೆ ಚಿತ್ರಕಲೆ ಮನೆತನದಿಂದ ಬಂದುದಾಗಿರಲಿಲ್ಲ. ಅದೇನೋ ಚಿತ್ರ ಬರೆಯುವ ಗೀಳು ಚಿಕ್ಕಂದಿನಿಂದಲೂ ಅಂಟಿಕೊಂಡಿತ್ತು. ಲೋಯರ್ ಸೆಕೆಂಡರಿ ಕ್ಲಾಸಿನಲ್ಲಿ ಓದುತ್ತಿದ್ದಾಗಲೇ ಚಿತ್ರ ಬರೆಯುವ ಹಂಬಲ ಮೈದುಂಬಿ ಬಂದಿತ್ತು. ಶಾಲೆಯಲ್ಲಿ ಕುಳಿತು ಉಪಾಧ್ಯಾಯರ ಮುಖಗಳನ್ನು ಕಾಗದದ ಮೇಲೆ ಮೂಡಿಸಿ ಏಟು ತಿಂದದ್ದೂ ಉಂಟು.



ಹೈಸ್ಕೂಲಿನಲ್ಲಿ ನಡೆಯುತ್ತಿದ್ದ ಚಿತ್ರಕಲಾ ಸ್ಪರ್ಧೆಗಳಲ್ಲಿ ತಪ್ಪದೇ ಬಹುಮಾನಗಳನ್ನು ಗಳಿಸುತ್ತಿದ್ದರು. ಬೆಂಗಳೂರಿನ ಬಸವನಗುಡಿ ರಾಷ್ಟ್ರೀಯ ವಿದ್ಯಾಶಾಲೆಯಲ್ಲಿ (ನ್ಯಾಷನಲ್ ಹೈಸ್ಕೂಲ್‌ನಲ್ಲಿ) ಕೆ. ಸಂಪದ್ಗಿರಿರಾಯರು ಮುಖ್ಯೋಪಾಧ್ಯಾಯರಾಗಿದ್ದ ಆ ಕಾಲದಲ್ಲಿ ಉತ್ತಮವಾದ ವರ್ಣಚಿತ್ರವೊಂದನ್ನು ರಚಿಸಿ ಪುರಸ್ಕಾರ ಸಹ ಪಡೆದಿದ್ದರು. ಇದನ್ನು ಗಮನಿಸಿದ್ದ ಅವರ ತಂದೆ ಶ್ಯಾಮರಾವ್ ಅವರು 'ಹರಿ.... ನಿನಗ್ಯಾಕೋ ಚಿತ್ರಬರೆಯುವ ಹುಚ್ಚು ಅಂಟಿಕೊಂಡಿದೆ. ನಿನಗೆ ಆದರಲ್ಲೇ ಮುಂದುವರೆಯಬೇಕೆಂದು ಆಸಕ್ತಿ ಇದ್ದಲ್ಲಿ ಹೇಳು, ಮುಂಬೈನ ಜೆ.ಜೆ. ಸ್ಕೂಲ್ ಆಫ್ ಆರ್ಟ್ಸ್‌ಗೆ ಸೇರಿಸುತ್ತೇನೆ' ಎಂದರು. ರೊಟ್ಟಿಜಾರಿ ತುಪ್ಪಕ್ಕೆ ಬಿದ್ದಂತಾಯಿತು. ಬಹಳ ಸಂತೋಷದಿಂದ ಒಪ್ಪಿಗೆ ಸೂಚಿಸಿದರು. ಆದರೆ ಆ ಕಾಲದಲ್ಲಿ ಕಲೆ, ನಾಟಕ, ನೃತ್ಯಗಳಿಗೆ ಆಸಕ್ತಿವಹಿಸುವವರನ್ನು ಸಮಾಜ ನಿಕೃಷ್ಟವಾಗಿ ಕಾಣುತ್ತಿತ್ತು. ಅದರಲ್ಲೂ ಉನ್ನತಾಧಿಕಾರಿಗಳಾಗಿದ್ದವರ ಕುಟುಂಬದವರು ಕಲೆಯತ್ತ ಒಲವು ತೋರುವುದೆಂದರೆ ಅದೇನೊ ಅವಜ್ಞೆ. ಇದೆಲ್ಲವನ್ನು ಅರಿತಿದ್ದ ಶ್ಯಾಮರಾವ್ ಅವರು ಹಲವಾರು ಊರುಗಳನ್ನು ಸುತ್ತಿ ಸ್ವಾನುಭವ ಪಡೆದಿದ್ದರಿಂದ ಈ ಮಾತುಗಳನ್ನು ಗಮನಕ್ಕೆ ತೆಗೆದುಕೊಳ್ಳದೇ ೧೯೨೬ರಲ್ಲಿ ಜೆ.ಜೆ. ಕಲಾಶಾಲೆಗೆ ಸೇರಿಸಲು ತೀರ್ಮಾನಿಸಿಯೇ ಬಿಟ್ಟರು. ಆ ವೇಳೆಗಾಗಲೇ ಇನಾಮತಿಯವರಿಗೆ ೧೧ ವರ್ಷದ ಅವರ ಅಕ್ಕನ ಮಗಳ ಜೊತೆಯಲ್ಲಿ ವಿವಾಹವಾಗಿದ್ದಿತು.

ರಾಜಚರಿತ ವಿಶಾರದ ಸಿ. ಹಯವದನರಾಯರ ನೆರವಿನಿಂದ ಮೈಸೂರು ಸರ್ಕಾರದ ವಿದ್ಯಾರ್ಥಿವೇತನ ತಿಂಗಳಿಗೆ ೩೦/- ರೂ.ನಂತೆ ದೊರೆಯಿತು. ತಂದೆಯ ಸ್ನೇಹಿತರಾಗಿದ್ದ ಎಂ.ಎಲ್. ಶ್ರೀನಿವಾಸಯ್ಯಂಗಾರ್ಯರು ಜೆ.ಜೆ. ಕಲಾಶಾಲೆಯ ಸಂಸ್ಥಾಪಕ ಜಮ್‌ಶೇಟ್ ಜೀಜಾಬಾಯಿ ಎಂಬ ಶ್ರೀಮಂತ ಕಲಾರಸಿಕನಿಗೆ ಶಿಫಾರಸ್ಸು ಪತ್ರವನ್ನು ಕೊಟ್ಟರು. ಸೇರ್ಪಡೆಗೆ ಅನುಕೂಲವಾಯಿತು. ಪ್ರಥಮ ವರ್ಷದಲ್ಲೇ ಅವರ ಚಿತ್ರವೊಂದಕ್ಕೆ ಬಹುಮಾನವೂ ದೊರಕಿತು. ಆಗ್ಗೆ ಉತ್ತಮ ಕಲಾವಿದ್ಯಾರ್ಥಿಗೆ ದೊರಕುತ್ತಿದ್ದ 'ಡಾಲಿ ಕರ್ಸೆಟ ಜೀ' ಬಹುಮಾನ ಪಡೆದ ಮೊದಲ ಮೈಸೂರಿಗರಾದರು (೧೯೨೯). ಮರುವರ್ಷ ಸರಕಾರದ ವತಿಯಿಂದಲೆ ಮೆಯೋ ವಿದ್ಯಾರ್ಥಿ ವೇತನವೂ ದೊರಕಿತು. ೧೯೩೦ರಲ್ಲಿ ಕಲಾಶಾಲೆಯ ವಿದ್ಯಾರ್ಥಿಗಳ ಕಲಾಕೃತಿಗಳು ಲಂಡನ್ನಿನಲ್ಲಿ ಪ್ರದರ್ಶಿತವಾದಾಗ ಇನಾಮತಿಯವರು ರಚಿಸಿದ 'ನ್ಯಾಯ' ಎಂಬ ಕೃತಿ ಬ್ರಿಟನ್ನಿನ ಕಲಾವಿಮರ್ಶಕರ ವಿಶೇಷ

ಪ್ರಶಂಸೆಗೆ ಪಾತ್ರವಾಗಿ ಬಹುಮಾನಗಳಿಸಿತು. ಇದರಿಂದ ಶಾಲೆಗೆ ಮಾತ್ರವಲ್ಲದೆ ವೈಯಕ್ತಿಕವಾಗಿ ಇನಾಮತಿ ಅವರಿಗೂ ಒಳ್ಳೆಯ ಹೆಸರು ತಂದಿತು. ಆಗ್ಗೆ ಇವರ ಕಲಾಗುರುಗಳಾಗಿದ್ದವರು ಎಲ್.ಎನ್. ಠಾಸ್ಕರ್, ಪ್ರಿನ್ಸಿಪಾಲ್ ಗ್ಲಾಡ್‌ಸ್ಟನ್ ಸಾಲೋಮನ್ ಅವರುಗಳು. ಹಾಗೆಯೇ ಕಲಾ ಸಹಪಾಠಿಗಳಾಗಿದ್ದವರು ಅಚರೇಕರ್, ಅಗರಕರ್, ಗೋಂದಾವರ್ಕರ್, ದೇವೂಸ್ಕರ್ ಮೊದಲಾದವರು. ನಂತರ ಮುಂಬೈನ ಆರ್ಟ್ ಸೊಸೈಟಿಯಲ್ಲಿ ಪ್ರದರ್ಶಿತವಾದ 'ತಾಜಮಹಲಿನ ಪ್ರತಿಬಿಂಬ' ಎಂಬ ಕೃತಿಯು ತುಂಬಾ ಜನರನ್ನು ಆಕರ್ಷಿಸಿತು. ಅಂದಿನ ವಿಖ್ಯಾತ ಕಲಾವಿಮರ್ಶಕ ಕನ್ಹಯ್ಯಲಾಲ್ ಮೆಚ್ಚುಗೆ ವ್ಯಕ್ತಪಡಿಸಿ ಪತ್ರಿಕೆಗಳಿಗೆ ಬರೆದರು. ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ಬಂತು.

ಕಲಾಭ್ಯಾಸ ಮುಗಿಯುತ್ತಿದ್ದಂತೆಯೇ ಅಂದಿನ ಪ್ರಖ್ಯಾತ ಆಂಗ್ಲಪತ್ರಿಕೆ ಮುಂಬಯಿಯ 'ಟೈಮ್ಸ್ ಆಫ್ ಇಂಡಿಯಾ' ಮತ್ತು 'ಇಲ್ಲಸ್ಟ್ರೇಟಡ್ ವೀಕ್ಲಿ'ಯಲ್ಲಿ ಕಲಾವಿದರಾಗಿ ಸೇವೆಸಲ್ಲಿಸಲು ಅವಕಾಶ ದೊರೆಯಿತು. ಆದರೆ ಕೆಲಸದ ಒತ್ತಡದಿಂದಾಗಿ ರಾಜೀನಾಮೆ ನೀಡಿ ಹೊರಬಂದರು. ಕೆಲಕಾಲ ಮೆಕೆನ್ಸಿಕಿಂಗ್ ಎಂಡ್ ಕೋ.ನಲ್ಲಿ ಕೆಲಕಾಲ ಕಲಾವಿದರಾಗಿ ಕಾರ್ಯನಿರ್ವಹಿಸಿದರು.

ಇದೇ ವೇಳೆಗೆ ಇನಾಮತಿಯವರ ತಂದೆಯವರು ಕೆಲಸದಿಂದ ನಿವೃತ್ತಿ ಹೊಂದಿದ ಕಾರಣ ಬೆಂಗಳೂರಿಗೆ ಬರುವ ಅನಿವಾರ್ಯತೆಯುಂಟಾಯಿತು (೧೯೩೩). ಇನಾಮತಿಯವರು ತಮ್ಮ ಕೆಲಸವನ್ನು ಬಿಟ್ಟು ಬೆಂಗಳೂರಿಗೆ ಬಂದು ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದರು. ಕೆಲ ತಿಂಗಳುಗಳಲ್ಲೇ ಈಗಿನ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಕಟ್ಟಡವನ್ನು ಕೊಂಡುಕೊಂಡರು. ವಿಶಾಲವಾದ ಬಂಗಲೆಯಂತಿದ್ದ ಆ ಸ್ಥಳದಲ್ಲಿ ಹಲವಾರು ವರ್ಷವಿದ್ದರು. ಆ ಸಂದರ್ಭದಲ್ಲಿ ಮೂರ್‌ಹೌಸ್ ಮತ್ತು ಬಗ್ಡಾಪಲಸ್ ಎಂಬ ವಿದೇಶಿ ಕಲಾವಿದರ ಸಂಪರ್ಕ ಹೊಂದಿ ವಾಣಿಜ್ಯ ಕಲಾಪರಿಣತಿ ಪಡೆದರು. ಆ ವೇಳೆಗೆ ಕಿರುಚಿತ್ರ (ಮಿನೇಚರ್ ಪೈಟಿಂಗ್ಸ್) ಮಾಡುವ ಅವಕಾಶ ಒದಗಿತು. ಇಂಡಿಯನ್ ಇನ್ಸಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಬಯೋ ಕೆಮಿಸ್ಟ್ರಿ ವಿಭಾಗದಲ್ಲಿ ಕೆಲಸಮಾಡುತ್ತಿದ್ದ ಡಾ. ಮಹದಿ ಹಸನ್ ಎಂಬ ವಿಜ್ಞಾನಿಗೆ ಅವರ ಶಾಸ್ತ್ರಕ್ಕೆ ಸಂಬಂಧಿಸಿದ ಕಿರುವರ್ಣ ಚಿತ್ರಗಳು ಬೇಕಾಗಿದ್ದವು. ಇನಾಮತಿಯವರು ಅದನ್ನು ಅತ್ಯಂತ ಶ್ರದ್ಧೆಯಿಂದ ಮಾಡಿಕೊಟ್ಟರು. ಕೆಲಕಾಲದ ನಂತರ ಅವರ ತಂದೆ ಶ್ಯಾಮರಾವ್ ಅವರು ಕಾಲವಾದರು. ಅಣ್ಣಂದಿರು ಸಹ ರಾಜ್ಯದ ಬೇರೆ ಬೇರೆ ಕಡೆ ವಾಸವಾಗಿದ್ದರಿಂದ ಇಷ್ಟು ದೊಡ್ಡ ಕಟ್ಟಡ ನಮಗೇಕೆ ಎಂದು ಅದನ್ನು ವಿಲೇವಾರಿ ಮಾಡಿಕೊಂಡು ಜಯನಗರದ ೭ನೇ ಬ್ಲಾಕ್‌ನಲ್ಲಿ ಅವರ ಸಹೋದರಿ ವಾಸವಾಗಿದ್ದ ಕಡೆಯೇ ಒಂದು ಸಣ್ಣ ಮನೆಯನ್ನು ಬಾಡಿಗೆಗೆ ಪಡೆದು ಮಡದಿ ಸುಶೀಲಬಾಯಿ ಅವರೊಡನೆ ವಾಸವಾಗಿದ್ದರು. ಈ ನಡುವೆ ಬೆಂಗಳೂರಿನಲ್ಲಿ ಅವರ ಕಲಾಭ್ಯಾಸಕ್ಕೆ ತಕ್ಕ ಕೆಲಸ ದೊರಕಲಿಲ್ಲವಾದ್ದರಿಂದ ಮುಂಬೈನತ್ತ ಮುಖಮಾಡಿ ಹೊರಟರು. ಸುಮಾರು ಮೂರ್ನಾಲ್ಕು ವರ್ಷ (೧೯೪೦-೪೩) ಅವರ ಸಂಬಂಧಿಕರ ಮನೆಯಲ್ಲಿ ವಾಸವಾಗಿದ್ದುಕೊಂಡು ಪ್ರಯತ್ನಿಸಿದರಾದರೂ ಅಲ್ಲಿಯೂ ಕೆಲಸ ದೊರಕಲಿಲ್ಲ. ಅನಂತರದಲ್ಲಿ ಮತ್ತೆ ಒಂದೆರಡು ವರ್ಷ ಬೆಂಗಳೂರು-ಮುಂಬೈಗೆ ಸುತ್ತಾಡುತ್ತಾ ಮರಳಿಯತ್ನವ ಮಾಡು ಎಂಬಂತೆ ಕೆಲಸಕ್ಕೆ ಪ್ರಯತ್ನಿಸಿದರು. ಆಗಲೂ ಅವರ ಮನ ಒಪ್ಪುವ ಕೆಲಸ ದೊರಕಲಿಲ್ಲ. ಮುಂಬೈ ಕಡೆಯ ಒಲವು ತೊರೆದು ಬೆಂಗಳೂರಿನಲ್ಲೇ ತಮ್ಮ ನೆಲೆಯನ್ನು ಸ್ಥಾಯಿಗೊಳಿಸಿದರು.

ವಿಮಾನ ಕಾರ್ಖಾನೆಯಲ್ಲಿ ವಿನ್ಯಾಸಗಾರ ವಿಭಾಗಕ್ಕೆ (ಡಿಸೈನ್ ಸೆಕ್ಷನ್) ಕಲಾವಿದರನ್ನು ತೆಗೆದುಕೊಳ್ಳುತ್ತಿದ್ದರು. ಎಸ್.ಆರ್. ಅಯ್ಯಂಗಾರ್, ಎಂ.ಟಿ.ವಿ. ಆಚಾರ್ಯ, ಎನ್.ಎಸ್.ಎಸ್. ಅಯ್ಯಂಗಾರ್ ಇವರೆಲ್ಲಾ ಅಲ್ಲಿ ಕೆಲಕಾಲ ಕೆಲಸಮಾಡುತ್ತಿದ್ದರು. ಇನಾಮತಿಯವರು ಪ್ರಯತ್ನಿಸಿ ಬೆಂಗಳೂರಿನ ಎಚ್.ಎ.ಎಲ್.ಗೆ ಸೇರಿದರು. ಇಲ್ಲಿನ ಕೆಲಸ ಕಲಾವಿದರಿಗೆ ಅನುಕೂಲವಾದುದ್ದಲ್ಲ. ಕುಂಚದ ಕೆಲಸವಂತೂ ಇಲ್ಲವೇ ಇಲ್ಲ. ಹಾಗಾಗಿ ಯಾವ ಕಲಾವಿದರೂ ಹೆಚ್ಚಿನ ವರ್ಷ ಕೆಲಸ ಮಾಡದೆ ಬಿಟ್ಟುಬಿಡುತ್ತಿದ್ದರು. ಇನಾಮತಿಯವರು ಸಹ ಅದೇ ದಾರಿ ತುಳಿದವರೇ. ಈ ಎಲ್ಲಾ ಸ್ಥಾನಪಲ್ಲಟಗಳಿಂದಾಗಿ ವಯಸ್ಸು ಸಹ ಮೀರಿದ ಕಾರಣ ತಾವು ಕಲಿತ ಕಲೆ ನಾಲ್ಕಾರು ಮಕ್ಕಳಿಗೆ ತಲುಪಿ, ಅವರು ಕಲಾವಿದರಾದರೆ ಕಲಿತದ್ದು ಸಾರ್ಥಕವೆಂದು ಭಾವಿಸಿ ಸುತ್ತಮುತ್ತಲಿನ ಆಚಾರ್ಯ ಪಾಠಶಾಲಾ, ವಿಜಯ ಕಾಲೇಜು, ನ್ಯಾಷನಲ್ ಹೈಸ್ಕೂಲ್ ಮುಂತಾದ ಶಾಲೆಗಳಿಗೆ ಅರೆಕಾಲಿಕ ಕಲಾಶಿಕ್ಷಕರಾಗಿ ಸೇವೆಸಲ್ಲಿಸುತ್ತಾ ಬಂದರು. ಯಾವಾಗಲೂ ಸತ್ಸಂಗ ಬಯಸುತ್ತಿದ್ದರು. ದೇಹ-ಮನಸ್ಸು ಸ್ತಿಮಿತದಲ್ಲಿರಬೇಕೆಂಬ ದೃಷ್ಟಿಯಿಂದ ಖ್ಯಾತ ಲೇಖಕ, ಯೋಗಾಭ್ಯಾಸ ಪಟು ಕೆ.ವಿ. ಅಯ್ಯರ್ ಅವರಲ್ಲಿ ಯೋಗವನ್ನು ಕಲಿತದ್ದೂ ಉಂಟು. ಅದನ್ನು ನಿತ್ಯವೂ ಅಭ್ಯಸಿಸುವ ಮೂಲಕ ಆರೋಗ್ಯ ಕಾಪಾಡಿಕೊಳ್ಳುತ್ತಾ ಬಂದಿದ್ದರು.



ಇನಾಮತಿಯವರು ಅನೇಕ ಕಲಾಕೃತಿಗಳನ್ನು ರ[illegible]ವರು. ಕಲಾರಚನೆಯಲ್ಲಿ ಅನೇಕರು ಮಾಡುವಂತೆ ಇವರಿಗೆ ಕೀರ್ತಿಕಾಮನೆಯನ್ನು ಬೆನ್ನಟ್ಟಿ ಹೋಗುವ ಉದ್ದೇಶ ಸರ್ವಥಾ ಇರಲಿಲ್ಲ. ಹಾಗೇನಾದರೂ ಉದ್ದೇಶವಿದ್ದಿದ್ದರೆ ಇವರೂ ಹಗಲುರಾತ್ರಿ ಕುಳಿತು ಕಲಾಕೃತಿಗಳನ್ನು ರಚಿಸಿ, ಖ್ಯಾತಿಯನ್ನು, ಹಣವನ್ನು ಗಳಿಸಬಹುದಾಗಿತ್ತು. ಒಮ್ಮೆ ಬಿ.ಬಿ. ಅಂಡ್ ಸಿ.ಐ ರೈಲ್ವೆ ಸಂಸ್ಥೆಗೆ ಬೆಂಗಾಲ್, ನಾಗಪುರ ವಿಭಾಗಗಳಿಗೆ ವಿಸಿಟ್ ಬಾಂಬೆ, ವಿಸಿಟ್ ನಾಗಪುರಗಳೆಂಬ ಪ್ರಚಾರದ ಭಿತ್ತಿ ಪತ್ರವನ್ನು (Poster) ರಚಿಸುವ ಅವಕಾಶ ದೊರಕಿತು. ಅದರಿಂದ ವಿಶೇಷ ಖ್ಯಾತಿಯೂ ಹಣವೂ ದೊರಕಿತು. ಆದರೆ ಇವುಗಳನ್ನೇ ಅತ್ಯಧಿಕ ಸಂಖ್ಯೆಯಲ್ಲಿ ಮಾಡಬೇಕಾಗಿ ಬಂದಾಗ ತಿರಸ್ಕರಿಸಿದರು. ಆ ಕಾಲದಲ್ಲಿ ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರು ಮುಂಬೈ ರೈಲ್ವೆ ನಿಲ್ದಾಣದಲ್ಲಿದ್ದ ಆ ಭಿತ್ತಿ ಪತ್ರಗಳನ್ನು ನೋಡಿ ಮೈಸೂರಿಗೆ ಹಿಂತಿರುಗಿದಾಗ ಮೈಸೂರು ರೈಲ್ವೆ ಅಧಿಕಾರಿಗಳನ್ನು ಕರೆಯಿಸಿ, ಆ ಕಲಾರಚನೆ ಬರೆದವರ ಕಡೆಯಿಂದಲೇ ಬರೆಸಿ ತನ್ನಿ ಎಂದು ಹೇಳಿದರು. ವಿಚಾರ ಮಾಡಿದಾಗ ಬೆಂಗಳೂರಿನವರೇ ಆದ ಇನಾಮತಿಯವರೇ ಅದರ ರಚನೆಯ ಕಲಾವಿದರಾಗಿದ್ದರು. ಅವರಿಗೆ 'ವಿಸಿಟ್ ಮೈಸೂರು ದಸರಾ' ಮತ್ತು 'ವಿಸಿಟ್ ಕೆ.ಆರ್.ಎಸ್.' ಎಂಬೆರಡು ಭಿತ್ತಿಪತ್ರ ರಚಿಸಲು ಮೈಸೂರು ಸರ್ಕಾರ ಆದೇಶಿಸಿತು. ಬಹಳ ಸಂತೋಷದಿಂದ ಒಪ್ಪಿಕೊಂಡು ಚಿತ್ರತಯಾರಿಸಿದರು. ಅರಮನೆಯ ಹಿನ್ನೆಲೆ, ಕೃಷ್ಣರಾಜ ಸಾಗರದ ಹಿನ್ನಲೆ ಮನಸೆಳೆಯುವಂತಿದ್ದವು.

ಯಾವಾಗಲೂ ಯಾವುದಾದರೂ ಒಳ್ಳೆಯ ಕೃತಿಯನ್ನು ತಯಾರಿಸಿದಾಗ ತಮ್ಮ ಕೆಲವು ಆಪ್ತ ಮಿತ್ರರುಗಳನ್ನು ಕರೆದು ತೋರಿಸುವ ಪದ್ಧತಿ ಅವರದು. ಹಾಗೆಯೇ ಆಗಲೂ ಭಿತ್ತಿಪತ್ರದ ಮೂಲ ರಚನಾ ವಿಧಾನವನ್ನು ತೋರಿಸಿದರು. ಆಗ ರಾಜ್ಯದ ಉನ್ನತ ಅಧಿಕಾರಿಗಳಾದ ಪಿ.ಹೆಚ್. ಕೃಷ್ಣರಾಯರು ನೋಡಿ ಬಹುವಾಗಿ ಮೆಚ್ಚಿಕೊಂಡರು. ಆದರೆ ಈ ಚಿತ್ರಗಳು ರೈಲ್ವೆ ಅಧಿಕಾರಿಗಳಿಗೆ ಹಿಡಿಸಲಿಲ್ಲ. 'ಹಿತ್ತಲಗಿಡ ಮದ್ದಲ್ಲ' ಎಂಬಂತೆ ವರ್ತಿಸಿ ಅದಕ್ಕೆ ಕೇವಲ ೫೦/- ರೂ.ಗಳನ್ನು ಕೊಡಲು ನಿರ್ಧರಿಸಿದರು. ಇದೇ ತೆರನಾದ ಕಲಾಕೃತಿಗೆ ಮುಂಬೈನಲ್ಲಿ ೨೫೦/- ರೂ. ಕೊಡುತ್ತಿದ್ದರು. ಈ ವಿಷಯ ತಿಳಿದ ಪಿ.ಎಚ್. ಕೃಷ್ಣರಾಯರು ಮಧ್ಯಪ್ರವೇಶಿಸಿ ಇನಾಮತಿಯವರಿಗೆ ಆದ ಅನ್ಯಾಯವನ್ನು ಸರಿಪಡಿಸಿದರು. ಇದಾದ ಮೇಲೆ ಇನಾಮತಿಯವರು ರೈಲ್ವೆ ಇಲಾಖೆಯವರಿಗೆ ಕೃತಿರಚಿಸುವ ಗೋಜಿಗೆ ಹೋಗಲಿಲ್ಲ.

ಇನ್ನೊಂದು ಸನ್ನಿವೇಶದಲ್ಲಿ ಮೈಸೂರು ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ದೃಷ್ಟಿ ಬಿದ್ದ ಪರಿಣಾಮವಾಗಿ ಅವರಿಗಾಗಿ ಏಳು ಕಲಾಕೃತಿ ರಚಿಸಿಕೊಟ್ಟರು. ಅವನ್ನು ಮಹಾರಾಜರು ಮೈಸೂರಿನ ಜಗನ್ಮೋಹನಾ ಬಂಗಲೆಯಲ್ಲಿ ಇರಿಸಿದರು. ಸ್ವಾತಂತ್ರ್ಯನಂತರ ಅಸ್ತವ್ಯಸ್ತವಾಗಿದ್ದ ಜಗನ್ಮೋಹನ ಬಂಗಲೆಯನ್ನು ನವೀಕರಿಸುವ ಸಂದರ್ಭದಲ್ಲಿ, ಕಲೆಯ ಬಗ್ಗೆ ಅರಿವುಳ್ಳ ಬ್ರಿಟೀಷ್ ಅಧಿಕಾರಿಯಾದ ಜೇಮ್ಸ್ ಎಚ್. ಕಸಿನ್ಸ್ ದಂಪತಿಗಳನ್ನು ಸರ್ಕಾರ ಆಹ್ವಾನಿಸಿತು. ಅವರು ಆಗ್ಗೆ ಮದನಪಲ್ಲಿಯ (ಕೋಲಾರ ಜಿಲ್ಲೆ) ನ್ಯಾಷನಲ್ ಕಾಲೇಜಿನಲ್ಲಿ ಅಧಿಕಾರಿಗಳಾಗಿದ್ದರು. ಹಾಗೆಯೇ ಅನಿಬೆಸೆಂಟರ ಥಿಯಸಾಫಿಕಲ್ ಸಂಸ್ಥೆಯಲ್ಲಿಯೂ ವ್ಯವಹಾರವಿಟ್ಟುಕೊಂಡಿದ್ದರು. ಕಸಿನ್ಸ್‌ರವರು ಜಗನ್ಮೋಹನ ಬಂಗಲೆಯ ಚಿತ್ರಕಲಾಕೃತಿಗಳನ್ನು ವ್ಯವಸ್ಥೆಗೊಳಿಸುತ್ತಿದ್ದಾಗ ಇನಾಮತಿಯವರ ಕೃತಿಗಳು ಅಲ್ಲೊಂದು ಇಲ್ಲೊಂದು ಇದ್ದುದನ್ನು ಗಮನಿಸಿ ಇನಾಮತಿಯವರದೆಲ್ಲಾ ಚಿತ್ರಗಳನ್ನು ಒಂದೇ ಗೋಡೆಗೆ ಹಾಕಿ (panel) ಅಲಂಕರಿಸಿದರು.

ಇನ್ನೊಂದು ಪ್ರಸಂಗದಲ್ಲಿ ಸ್ವಾತಂತ್ರ್ಯಾನಂತರ ಭಾರತಕ್ಕೆ ಬಂದಿದ್ದ ಸ್ವೀಡನ್ನಿನ ಕಲಾವಿದರೊಬ್ಬರು ಮತ್ತು ಅವರ ವೈದ್ಯ ಮಿತ್ರರು, ಜಗನ್ಮೋಹನ ಬಂಗಲೆಯಲ್ಲಿನ ಇನಾಮತಿಯವರ ಕೃತಿಗಳನ್ನು ಕಂಡು ಆನಂದಪಟ್ಟು, ಅಲ್ಲಿಯೇ ಇನಾಮತಿಯವರ ವಿಳಾಸಪಡೆದು ಬೆಂಗಳೂರಿಗೆ ಬಂದು ನಿವಾಸವನ್ನು ಹುಡುಕಿ, ಪ್ರತ್ಯಕ್ಷವಾಗಿ ಅವರೊಡನೆ ಮಾತಾಡಿ ಎರಡು ಕೃತಿಗಳನ್ನಾದರೂ ಮಾಡಿಕೊಡಲು ಕೇಳಿಕೊಂಡರು. ಇನಾಮತಿಯವರು ಒಪ್ಪಿದರಾದರೂ ಭಾರತ ಬಿಡುವ ಮುನ್ನ ಸಕಾಲಕ್ಕೆ ಸ್ವೀಡನ್ನಿನವರಿಗೆ ಕಲಾಕೃತಿ ಮಾಡಿಕೊಡಲಾಗಲಿಲ್ಲ. ಇನಾಮತಿ ಅವರಿಗೆ ಬೇರೆಬೇರೆ ಸಂಸ್ಥೆಗಳ ಕಾರ್ಯದೊತ್ತಡವಿದ್ದುದೇ ಇದಕ್ಕೆ ಪ್ರಮುಖ ಕಾರಣ. ನಂತರ ಕಲಾಕೃತಿಯನ್ನು ಅಂಚೆಯ ಮೂಲಕ ಕಳಿಸಿಕೊಟ್ಟರು. ಅಪಾರ ಮೆಚ್ಚುಗೆಯ ನುಡಿಯೊಂದಿಗೆ ತಕ್ಕ ಗೌರವ ಧನವನ್ನು ಸ್ವೀಡನ್ನಿನಿಂದ ಕಳಿಸಿಕೊಟ್ಟರು.

ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ದೆಹಲಿಯಲ್ಲಿ ನಡೆಯಲಿದ್ದ ಬೃಹತ್ ಚಿತ್ರಕಲಾ ಪ್ರದರ್ಶನಕ್ಕೆ ಕಳಿಸಲೆಂದೇ ಇನಾಮತಿಯವರು ಅತ್ಯಂತ ಶ್ರದ್ಧೆಯಿಂದ ಒಂದು 'ರಾಧಾಕೃಷ್ಣ' ಕೃತಿಯನ್ನು ರಚಿಸಿದರು. ಯಥಾಪ್ರಕಾರ ಆ ಕೃತಿಯನ್ನು ಪ್ರದರ್ಶನಕ್ಕೆ ಕಳುಹಿಸುವುದಕ್ಕೆ ಮುನ್ನ ಸ್ನೇಹಿತರನ್ನು ಆಹ್ವಾನಿಸಿದರು. ಇವರ ಕೃತಿಗಳನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಬೆಂಗಳೂರಿನ ಚಿಕ್ಕಪೇಟೆಯ ಸುಪ್ರಸಿದ್ಧ ರೇಷ್ಮೆ ವ್ಯಾಪಾರಿಗಳೊಬ್ಬರು ಅಂದು ನೋಡಲು ಬಂದಿದ್ದರು. ಅವರು ಅದನ್ನು ವೀಕ್ಷಿಸಿದ ಕೂಡಲೇ ಕೈಗೆತ್ತಿಕೊಂಡು 'ಇನಾಮತಿಯವರೆ ಈ ಕೃತಿ ನನಗೆ ಬೇಕೇಬೇಕು, ನೀವು ದೆಹಲಿ ಪ್ರದರ್ಶನಕ್ಕೆ ಕಳುಹಿಸಿದರೆ ಅಲ್ಲಿ ಯಾರಾದರೂ ಅಥವಾ ಸರ್ಕಾರವೇ ಕೇಳಿದಲ್ಲಿ ಇಲ್ಲವೆನ್ನಲಾಗುವುದಿಲ್ಲವಷ್ಟೇ? ನೀವು ಈಗಲೇ ನನಗೆ ಕೊಟ್ಟುಬಿಡಿ. ತೆಗೆದುಕೊಳ್ಳಿ ಚೆಕ್. ನಿಮಗೆ ಸರಿಕಂಡಷ್ಟು ಹಣ ಬರೆದುಕೊಳ್ಳಿ' ಎಂದು ಆ ರೇಶ್ಮೆ ವ್ಯಾಪಾರಿಗಳು ಸಹಿ ಹಾಕಿ ಚೆಕ್ ಕೊಟ್ಟೇ ಬಿಟ್ಟರು. ಇದು ಇನಾಮತಿಯವರ ಕಲಾಕೃತಿಗಳಿಗಿದ್ದ ಆಕರ್ಷಣೆಗೆ ಒಂದು ಉದಾಹರಣೆ.

ಮೈಸೂರಿನಲ್ಲಿ ನಡೆದ ಕಲಾಪ್ರದರ್ಶನವೊಂದರಲ್ಲಿ ಅರಮನೆಯ ಕಲಾವಿದರು, ಮೈಸೂರು ಚಾಮರಾಜೇಂದ್ರ ವೃತ್ತಿಶಿಕ್ಷಣ ಶಾಲೆಯ ಕಲಾಬೋಧಕರು ಆಗಿದ್ದ ವೈ. ಸುಬ್ರಮಣ್ಯರಾಜು ಅವರು ಮಾತನಾಡುತ್ತಾ, "ಇನಾಮತಿಯವರು ಯಾವುದೇ ಸ್ಕೆಚ್ ಮಾಡಲಿ ಅಥವಾ ಪೂರ್ಣ ಚಿತ್ರರಚಿಸಲಿ ಎಳೆಯುವ ಗೆರೆಗಳಲ್ಲಿ ದೃಢತೆ ಇರುತ್ತಿತ್ತು. ನಿರ್ದಿಷ್ಟವಾದ, ನಿಖರವಾದ ಆ ಸಂದರ್ಭಪಾತ್ರಗಳನ್ನು ಗಮನದಲ್ಲಿಟ್ಟುಕೊಂಡು ಗೆರೆಎಳೆಯುತ್ತಿದ್ದರು. ಅದು ತಪ್ಪಾಯಿತೆಂದು ಹೇಳುವ ಹಾಗೆ ಇಲ್ಲ. ಅಂತಹ ಖಚಿತತೆ ಅವರದಾಗಿತ್ತು" ಎಂಬ ಅಭಿಪ್ರಾಯವನ್ನು ಕೇಳಿದ ಇನಾಮತಿಯವರ ಆಪ್ತಮಿತ್ರರೂ ಆಗಿದ್ದ ಪ್ರಸ್ತುತ ನಮ್ಮೊಡನೆ ಇರುವ ಬಿ. ಶ್ರೀನಿವಾಸಮೂರ್ತಿಗಳವರು ತಮ್ಮ ಹಿನ್ನೆನಪುಗಳನ್ನು ನನ್ನೊಡನೆ ಹಂಚಿಕೊಂಡರು.

ಬೆಂಗಳೂರಿನ ಸುಪ್ರಸಿದ್ಧ ಕಲಾವಿದರಾಗಿದ್ದ ರುಮಾಲೆ ಚೆನ್ನಬಸವಯ್ಯನವರು ಒಂದು ಸಾರಿ ಇನಾಮತಿಯವರನ್ನು ಆಗಿನ ಮುಖ್ಯಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರಿಗೆ ಪರಿಚಯಿಸಿದರು. ಕೆಂಗಲ್ ಹನುಮಂತಯ್ಯನವರು ಇನಾಮತಿಯವರ ಅನೇಕ ಕಲಾಕೃತಿಗಳನ್ನು ಕೊಂಡುಕೊಂಡು, ದೇಶ ವಿದೇಶಗಳಿಂದ ಬರುತ್ತಿದ್ದ ಗಣ್ಯ ಮಹನೀಯರುಗಳಿಗೆ ಉಡುಗೊರೆಯಾಗಿ ಕೊಡುತ್ತಿದ್ದರು. ಹಾಗೆಯೇ ತಮ್ಮ ನಿವಾಸ ಮತ್ತು ರಾಜಭವನದಲ್ಲಿ ಸಹ ಪ್ರದರ್ಶಿಸಿದ್ದರು.




ಕಲಾಶಿಕ್ಷಕರಾಗಿ ಇನಾಮತಿಯವರು

ಮುಂಬೈನಲ್ಲಿ ಕಲಾಪದವಿ ಪಡೆದುಬಂದ ನಂತರ ಸುಮಾರು ೫೦ ವರ್ಷಗಳ ಕಾಲ ಬೆಂಗಳೂರಿನಲ್ಲಿದ್ದರು. ಇವರು ತಾರುಣ್ಯವಿದ್ದಾಗಲೂ ಖಾಯಂ ಕೆಲಸಕ್ಕೆ ಪ್ರಯತ್ನಿಸಲಿಲ್ಲ. ಕಲಾಶಿಕ್ಷಕರ ಬೇಡಿಕೆ ಇದ್ದ ಕಾಲವದು. ಇಲ್ಲವೆ ಇವರೇ ಒಂದು ಕಲಾಶಾಲೆಯನ್ನಾದರೂ ತೆರೆಯಬಹುದಾಗಿತ್ತು. ಆದರೆ ಇದಾವುದನ್ನು ಅವರು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಇದ್ದುದರಲ್ಲಿಯೇ ತೃಪ್ತಿಪಡುವ ಸಂತೃಪ್ತ ಜೀವಿ ಅವರು. ಹಾಗಾಗಿ ಅವರು ಅರೆಕಾಲಿಕ ಕಲಾಶಿಕ್ಷಕರಾಗಿ ಹಲವಾರು ಶಾಲೆಗಳಲ್ಲಿ ಕೆಲಸಮಾಡುತ್ತಿದ್ದರು. ಸೇವೆಸಲ್ಲಿಸಿದ ಸಂಸ್ಥೆಗಳೆಂದರೆ ಆಚಾರ್ಯ ಪಾಠಶಾಲಾ, ನ್ಯಾಷನಲ್ ಕಾಲೇಜು ಜೊತೆಗೆ ಕೆಲವು ಶ್ರೀಮಂತರ ಮನೆಗಳಿಗೆ ಕಲಾಬೋಧನೆಗೆ ಹೋಗುತ್ತಿದ್ದರು.

ಅಮೇರಿಕಾದ ಪೆನ್ಸಿಲ್‌ವೇನಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಎರಡು ವರ್ಷಕಾಲ ಭಾರತೀಯ ಚಿತ್ರಕಲೆಯ ಬಗ್ಗೆ ಬೋಧನೆ ಮಾಡಿದ್ದರು. ಆಂಗ್ಲ ಭಾಷೆಯಲ್ಲಿ ಒಳ್ಳೆಯ ಹಿಡಿತವಿತ್ತು. ಪತ್ರಿಕೆಗಳಿಗೆ ಕಲೆ ಮತ್ತು ಕಲಾವಿದರನ್ನು ಕುರಿತು ಆಗಾಗ್ಗ ಲೇಖನ ಬರೆಯುತ್ತಿದ್ದರು. ಹಾಗೆಯೇ ಹಿಂದಿಯನ್ನು ಅಭ್ಯಾಸ ಮಾಡಿದ್ದರು. ಕಿರುಕವನ, ಲೇಖನಗಳನ್ನು ಪತ್ರಿಕೆಗಳಿಗೆ ಕಳಿಸುವ ಪರಿಪಾಠವಿತ್ತು.

ತಮ್ಮನ್ನು ತಾವು ಎಂದೂ ಹೊಗಳಿಕೊಳ್ಳುವ ಗುಣ ಅವರದಲ್ಲ. ಹಾಗೆಯೇ ಇತರರನ್ನು ತೆಗಳುವ ಗುಣವೂ ಇರಲಿಲ್ಲ. ಕಂಡ ಒಳ್ಳೆಯದನ್ನು ಮಾತ್ರ ಸ್ವೀಕರಿಸುತ್ತಿದ್ದರು. ಸೋಮಾರಿತನವೆಂಬುದೇ ಅವರ ಬಳಿ ಸುಳಿಯುತ್ತಿರಲಿಲ್ಲ. ಮನೆಯಲ್ಲಿ ಹೆಚ್ಚು ಹೊತ್ತು ಎಂದೂ ಕಳೆಯುತ್ತಿರಲಿಲ್ಲ. ನಿತ್ಯದ ಕರ್ಮಗಳನ್ನು ಪೂರೈಸಿ, ಮುಂಜಾನೆ ಮನೆಬಿಟ್ಟು ತಮ್ಮ ರಥದಲ್ಲಿ (ಸೈಕಲ್) ಹೊರಟರೆ ಅವರ ಮನೆಯ ಹತ್ತಿರವೇ ಇದ್ದ ಆಪ್ತ ಸ್ನೇಹಿತರು, ಪತ್ರಕರ್ತರು ಆಗಿದ್ದ ಬಿ. ಶ್ರೀನಿವಾಸಮೂರ್ತಿ ಅವರ ಮನೆಗೆ ಬಂದು ಅಂದಿನ ತಿರುಗಾಟದ ವಿಚಾರ ಅವರಿಗೆ ಹೇಳಿ, ಗಂಟಲು ಬೆಚ್ಚಗೆ ಮಾಡಿಕೊಂಡು (ಕಾಫಿ ಕುಡಿದು) ಹೊರಟರೆ ಬೆಳಗಿನ ಪಾಠದ ಮನೆಗಳು, ನಂತರ ತಮ್ಮ ದಿನನಿತ್ಯದ ಶಾಲೆಗಳಿಗೆ ಹಾಜರಾಗುವುದು, ಸಂಜೆ ಸ್ನೇಹಿತರಾದ



ಎಚ್.ಎನ್. ನಾರಾಯಣ, ಎಸ್.ಆರ್. ಅಯ್ಯಂಗಾರ್, ಎನ್.ಎಸ್.ಎಸ್. ಅಯ್ಯಂಗಾರ್ ಮುಂತಾದವರೊಡನೆ ಮಾತಾಡಿ, ಇಲ್ಲವೆ ಅವರೇ ಸ್ಥಾಪಿಸಿದ ಚಿತ್ರಕಲಾವಿದರ ಮಹಾಪರಿಷತ್ತಿನ ಸಂಸ್ಥೆಯ ಕಾರ್ಯಚಟುವಟಿಕೆ ಬಗ್ಗೆ ಚರ್ಚಿಸುತ್ತಾ ಕಾರ್ಯಕ್ರಮಕ್ಕೆ ಪೂರಕವಾದ ಹಿನ್ನೆಲೆ ಒದಗಿಸಿಕೊಂಡು ಮನೆ ಸೇರುತ್ತಿದ್ದುದು ಸಂಪೂರ್ಣ ಕತ್ತಲಾದಾಗ. ಇದು ಅವರ ದೈನಂದಿನ ದಿನಚರಿಯಾಗಿತ್ತು.

ವಿದ್ಯಾರ್ಥಿಗಳೊಡನೆ ಇನಾಮತಿಯವರು

ಭೂದೃಶ್ಯ ರಚಿಸುವಾಗ ಇತರ ಕಲಾವಿದರಂತೆ ಅತ್ಯಂತ ಬೆಲೆಬಾಳುವ ಅನ್ಯದೇಶದ ವಿನ್ಸನ್ ನ್ಯೂಟನ್ ಕಂಪನಿಯ ಅಥವಾ ಗಿಟಾರ್ ಕಂಪನಿಯ ವರ್ಣಗಳೇ ಬೇಕೆಂದಾಗಲಿ, ಅಲ್ಲಿ ತಯಾರಿಸಿದ ಲಾಂಛನವುಳ್ಳ (Brand) ಕುಂಚಗಳೆ ಬೇಕೆಂದಾಗಲಿ ಬಯಸಿದವರಲ್ಲ. ಅದರಲ್ಲೂ ವಿದ್ಯಾರ್ಥಿಗಳಿಗೆ ಚಿತ್ರರಚಿಸುವ ವಿಧಾನ ತೋರಿಸುವ ಸಂದರ್ಭದಲ್ಲಿ ಅವರು ಹೇಳುತ್ತಿದ್ದ ಒಂದೊಂದು ಮಾತು ಮನನೀಯ. ಆರ್ಥಿಕವಾಗಿ ದುರ್ಬಲರಾದವರಿಗೆ ಇಂತಹುದೇ ವರ್ಣಗಳು ಬೇಕೆಂದು ನಿರ್ಬಂಧಪಡಿಸಿದರೆ ಅವರು ತರುವುದಾದರೂ ಎಲ್ಲಿ? ಕಲಿಯುವ ಆಸೆಯೆ ಕಮರಿ ಹೋಗಬಹುದು. ಅದರ ಬದಲಾಗಿ ಅವರಲ್ಲಿರುವ ಬಣ್ಣಗಳನ್ನೆ ಹೇಗೆ ಬಳಸಿಕೊಳ್ಳಬೇಕೆಂಬುದನ್ನು ತಿಳಿಸುವುದು ಉತ್ತಮ ಎನ್ನುತ್ತಿದ್ದರು. ವಿದ್ಯಾರ್ಥಿಗಳಲ್ಲಿದ್ದ ಸಾಮಾನ್ಯ ಮಟ್ಟದ (Student quality) ಬಣ್ಣಗಳನ್ನೆ ಪಡೆದುಕೊಂಡು ಚಿತ್ರರಚಿಸಿ ತೋರಿಸುತ್ತಿದ್ದರು.

ಕಲಾವಿದ ರಚಿಸುವ ಚಿತ್ರ ನೈಜತೆಯಿಂದ ಕೂಡಿರಬೇಕಾದರೆ ಹಲವು ಶ್ರೇಣಿಯಲ್ಲಿರುವ ಹಸಿರು, ಕೆಂಪು, ನೀಲಿ, ಹಳದಿಗಳು ಅಗತ್ಯ ಎಂಬುದನ್ನು ಚೆನ್ನಾಗಿ ಅರಿತಿದ್ದರೂ, ಅದನ್ನು ಮಕ್ಕಳ ಮನಸ್ಸಿನ ಮೇಲೆ ಹೇರಿ ಆ ಮಿಶ್ರಿತ ವರ್ಣಗಳ ಹೆಸರನ್ನು ಜ್ಞಾಪಕವಿಟ್ಟುಕೊಳ್ಳಲಾರದೆ ಪರಿತಪಿಸುವಂತಾಗಬಾರದು. ಅದಕ್ಕಾಗಿ ಸರಳವಾದ ರೀತಿಯ ಚಿತ್ರರಚನಾ ವಿಧಾನ ಅಗತ್ಯವೆನ್ನುತ್ತಿದ್ದರು. ಅವರು ಹೆಚ್ಚಾಗಿ ಆಚಾರ್ಯ ಚಿತ್ರಕಲಾಭವನದ ವಿದ್ಯಾರ್ಥಿಗಳನ್ನು ಹಾಗೂ ತಮ್ಮ ಬಳಿಯಲ್ಲಿ ಕಲಿಯುತ್ತಿದ್ದ ಕೆಲವು ವಿದ್ಯಾರ್ಥಿಗಳನ್ನು ಬರಹೇಳುತ್ತಿದ್ದ ಸ್ಥಳಗಳು ಕಬ್ಬನ ಉದ್ಯಾನವನ, ಲಾಲ್‌ಬಾಗ್, ಗವೀಪುರಂ ಗಂಗಾಧರಸ್ವಾಮಿ ದೇವಾಲಯದ ಸುತ್ತಮುತ್ತಲಿನ ಪರಿಸರ, ಬಸವನಗುಡಿಯ ಭವ್ಯ ನೋಟಗಳು, ಮೇ ತಿಂಗಳು ಬಂತೆಂದರೆ ಲಾಲ್‌ಬಾಗಿನ ಕೆರೆಬಳಿಯಿರುವ ಕೆಂಪು ಹೂವಿನ (May flower) ಮರಗಳ ಸಾಲು, ಹಾಗೆ ಬೆಂಗಳೂರಿನ ಹೊರವಲಯವಾದ ಮಾಗಡಿ ರಂಗನಾಥಸ್ವಾಮಿ ದೇವಾಲಯದ ಸಮುಚ್ಚಯ, ಸಾವನದುರ್ಗದ ಬೆಟ್ಟಗುಡ್ಡಗಳ ವಿಹಂಗಮ ನೋಟ, ಬನ್ನೇರುಘಟ್ಟದ ಬಂಡೆ ಇವು ಮುಖ್ಯ ತಾಣಗಳಾಗಿದ್ದವು.

ಬೆಂಗಳೂರಿನ ಯಾವುದೇ ಭಾಗಕ್ಕೆ ಬರಬೇಕಾಗಿದ್ದರೂ ತಮ್ಮ ಒಡನಾಡಿಯಂತಿದ್ದ ಸೈಕಲ್ ತುಳಿದುಕೊಂಡೆ ಬರುತ್ತಿದ್ದ ಅವರು ಬರುವಾಗ ಸಾಧಾರಣವಾದ ಕೈಚೀಲದಲ್ಲಿ ಕೆಲವು ಖಾಲಿ ಕಾಗದಗಳು, ಜಲವರ್ಣ ಚಿತ್ರರಚನೆಗೆ ಉಪಯೋಗಿಸುವ ಕಾಗದದ ಕಟ್ಟು (Water colour pad) ತರುತ್ತಿದ್ದರು. ಕೆಲವು ವೇಳೆ ಹಾಗೆಯೇ ಬಂದು ವಿದ್ಯಾರ್ಥಿಗಳಿಗೆ ರಚನಾ ವಿಧಾನ ತೋರಿಸುವ ಸಲುವಾಗಿ ಅವರವರ ಕಾಗದದಲ್ಲೇ ಸೀಸದಕಡ್ಡಿಯ ಮೂಲಕವಾಗಲೀ ಅಥವಾ ವರ್ಣಚಿತ್ರ ರಚಿಸುವ ಮೂಲಕವಾಗಲೀ ಬರೆದು ತೋರಿಸಿ ಅವರಿಗೇ ನೀಡುತ್ತಿದ್ದರು. ಆಯ್ಕೆ ಮಾಡಿಕೊಳ್ಳುವ ವಸ್ತು (subject) ಸಹ ಅತ್ಯಂತ ಸರಳವಾದರೂ ಒಂದು ಕಡೆಯಿಂದ ಬಿಸಿಲು ಬೀಳುವಂತಿರಬೇಕು. ಯಾವುದಾದರೊಂದು ಮರ, ಮನೆ, ಮಂಟಪ,



ಪಾಳುದೇಗುಲದ ಪಾರ್ಶ್ವನೋಟ, ದೇವಾಲಯದ ಗೋಪುರ, ಕಲ್ಲುಬಂಡೆ, ಪೊದೆ, ಅದಕ್ಕೆ ಹೊಂದಿಕೊಂಡಂತೆ ಎಡಬಲಗಳಲ್ಲಿ ಗಿಡದ ಗುಂಪು, ಹರಿವ ನದಿ, ರಸ್ತೆಯ ಬದಿ ನಿಂತನೀರು, ಅದರ ಪ್ರತಿಬಿಂಬ, ಅಲ್ಲೊಬ್ಬರು ಇಲ್ಲೊಬ್ಬರು ಸಂದರ್ಭಕ್ಕನುಗುಣವಾಗಿ ಸುಳಿದಾಡುವ ಹೆಂಗಳೆಯರು, ಬಂದುಹೋಗುವ ಜನಸಮುದಾಯ ಹೀಗೆ ಸರಳೀಕೃತವಾದ ವಿಷಯಗಳನ್ನೇ ವಿಶೇಷಣಗೊಳಿಸಿದಂತೆ ಚಿತ್ರರಚನೆ ಮಾಡಿ ತೋರಿಸುತ್ತಿದ್ದರು. ಕೇವಲ ಒಂದೆರಡು ಗಂಟೆಯೊಳಗೆ ಚಿತ್ರರಚಿಸಿ ತೋರಿಸುತ್ತಿದ್ದ ಇನಾಮತಿ ಅವರು ನೆರಳು ಬೆಳಕುಗಳ ಸಂಯೋಜನೆಗಾಗಿ ಆರಿಸಿಕೊಳ್ಳುತ್ತಿದ್ದ ಕಾಲ ಬೆಳಿಗ್ಗೆ ೯ ರಿಂದ ೧೧ರ ವರೆಗೆ.

ಇನಾಮತಿಯವರ ಕಲಾರಚನೆಯ ವಿಶೇಷವೆಂದರೆ ಎಲ್ಲಿಯೂ ಹೆಚ್ಚಾಗಿ ಪ್ರಖರ ವರ್ಣಗಳನ್ನು (warm colour) ಬಳಸುತ್ತಿರಲಿಲ್ಲ. ತಂಪು ವರ್ಣಗಳಿಗೆ (cold colour) ಪ್ರಾಧಾನ್ಯ. ಭೂದೃಶ್ಯ ರಚನೆಯಲ್ಲಿ ಮುಂಜಾನೆಯ ಮುಸುಕಿನ, ಸಂಜೆಗತ್ತಲಿನ, ಬಿಸಿಲ್ಗಾಣದ ಶಿಶಿರ ಋತುವಿನ ಸನ್ನಿವೇಷದಂತೆ ಕಾಣುವಂತೆ ರಚಿಸುವ ಮನೋಧರ್ಮ ಅವರದು. ಪ್ರತಿ ಬಣ್ಣಗಳ ಬಳಕೆಯನ್ನು ಬಾಯಿಂದ ಹೇಳುತ್ತಾ ಹೇಳುತ್ತಾ ರಚಿಸುವ ವಿಧಾನ ಅವರದು. ವಿದ್ಯಾರ್ಥಿಗಳಾಗಲಿ ಅಥವಾ ನೋಡಲು ಬಂದವರಾಗಲಿ ಏನಾದರೂ ಪ್ರಶ್ನಿಸಿದರೆ ಬರೆಯುವುದನ್ನು ನಿಲ್ಲಿಸಿ, ತಮ್ಮ ಚಿತ್ರರಚನೆಯಲ್ಲಿನ ವಿಶೇಷತೆಯನ್ನು ವಿವರಿಸಿ, ದೂರದಲ್ಲಿಟ್ಟು ನೋಡಿ ಎಂದು ಹೇಳುತ್ತಿದ್ದರು. ಮತ್ತೆ ಅವಶ್ಯವಿದ್ದಲ್ಲಿ ತಿದ್ದಿ, ದೂರವಿರಿಸಿ ದೂರ-ಸಾಮಿಪ್ಯಗಳ, ಕತ್ತಲೆ ಬೆಳಕುಗಳ ವಿವರ ನೀಡುತ್ತಾ ವಿದ್ಯಾರ್ಥಿಗಳೊಡನೆ ಬೆರೆಯುತ್ತಿದ್ದರು. ಅವರಲ್ಲಿ ಒಬ್ಬರಾಗುತ್ತಿದ್ದರು. ಬೇಸರಿಕೆ ಎಂಬುದು ಅವರ ಬಳಿ ಸುಳಿಯುತ್ತಲೇ ಇರಲಿಲ್ಲ.

ವಿದ್ಯಾರ್ಥಿಗಳಿಗಾಗಿ ಚಿತ್ರಿಸಿದ ನಂತರ ಸಾಮಾನ್ಯವಾಗಿ ಸಹಿ ಹಾಕುತ್ತಿರಲಿಲ್ಲ. ಕೇಳಿದರೆ ಸಹಿ ಕಟ್ಟಿಕೊಂಡು ಏನು ಮಾಡುವಿರಿ? ನಿಮಗೆ ಮಾಡುವ ವಿಧಾನ ತಿಳಿಯಿತಲ್ಲವೆ? ಅದನ್ನು ಗಮನಿಸಿ ಎಂದು ಬುದ್ಧಿ ಹೇಳುತ್ತಿದ್ದರು. ನಿಸರ್ಗದೃಶ್ಯ ರಚನಾ ಸ್ಥಳಕ್ಕೆ ಅವರ ಸ್ನೇಹಿತರು, ಶಿಷ್ಯರೂ ಆದ ಹೆಚ್.ಎಸ್. ನಾರಾಯಣ ಅವರು ಮತ್ತು ಎನ್.ಎಸ್.ಎಸ್. ಅಯ್ಯಂಗಾರ್‌ರವರು ಸಹ ಆಗಾಗ್ಗೆ ಬರುತ್ತಿದ್ದರು. ಎಂ.ಟಿ.ವಿ. ಆಚಾರ್ಯರು ತಮ್ಮ ಪತ್ನಿ ಸಹಿತ, ವಿದ್ಯಾರ್ಥಿಗಳೊಡನೆ ಬರುತ್ತಿದ್ದರಲ್ಲದೆ ಅಲ್ಪ ಉಪಹಾರಕ್ಕೆ ವ್ಯವಸ್ಥೆ ಮಾಡಿಕೊಂಡೇ ಬರುತ್ತಿದ್ದರು. ಎಲ್ಲರೂ ಸೇರಿ ಸಣ್ಣ ಔತಣಕೂಟ ನಡೆಸಿ, ಬರೆದ ಚಿತ್ರಗಳ ಬಗ್ಗೆ, ಇನ್ನೂ ಬರೆಯಬೇಕಾಗಿರುವ ಚಿತ್ರಗಳ ಬಗ್ಗೆ ಚರ್ಚಿಸಿ, ಮುಂದಿನವಾರದ ಸ್ಥಳ ಯಾವುದೆಂಬುದನ್ನು ನಿರ್ಧರಿಸಿ ಅವರವರ ಸ್ಥಳಕ್ಕೆ ಹಿಂತಿರುಗುತ್ತಿದ್ದರು.

ತಮ್ಮ ಇಳಿವಯಸ್ಸಿನಲ್ಲೂ ಕಲಾವಿದರ, ಕಲಾರಸಿಕರ ಮನೆಗಳಿಗೆ ಹೋಗಿ ಬರುವ ಹವ್ಯಾಸವಿಟ್ಟುಕೊಂಡಿದ್ದ ಇನಾಮತಿಯವರು ಒಮ್ಮೆ ಅನಿರೀಕ್ಷಿತವಾಗಿ ಮಲ್ಲೇಶ್ವರಂನಲ್ಲಿದ್ದ ಯು.ಎಸ್. ವೆಂಕಟರಾಮನ್ ಅವರ ಮನೆಗೆ ಬಂದರು. ಸಂತೋಷದಿಂದ ಸ್ವಾಗತಿಸಿದ ವೆಂಕಟರಾಮನ್ 'ನೀವು ನಿಮ್ಮ ನೆನಪಾಗಿ ಒಂದು ಚಿತ್ರರಚಿಸಿಕೊಡಬೇಕು' ಎಂದು ಕೇಳಿದರು. ಯಾರೇ ಕೇಳಿದರೂ ಇಲ್ಲವೆನ್ನುವ ಗುಣ ಅವರದಲ್ಲವಾದ್ದರಿಂದ ಒಪ್ಪಿ, ಅವರ ಬಳಿಯಲ್ಲಿದ್ದ ಬಣ್ಣ ಮತ್ತಿತರ ಪರಿಕರಗಳನ್ನು ಪಡೆದು ರಾಜಾಜಿನಗರ ೧ನೇ ಬ್ಲಾಕ್‌ನಲ್ಲಿನ ಸೆಂಟ್ ಥೆರೆಸಾ ಆಸ್ಪತ್ರೆಯ ಒಂದು ಭಾಗವನ್ನಾರಿಸಿಕೊಂಡು ಚಿತ್ರರಚಿಸಿಕೊಟ್ಟರು (೧೯೮೩). ಬಹುಶಃ ಅದೇ ಅವರ ಕೊನೆಯ ನಿಸರ್ಗದೃಶ್ಯ ಚಿತ್ರವೆಂದು ತೋರುತ್ತದೆ.

ಸಂಸ್ಥಾಪಕರಾಗಿ ಇನಾಮತಿಯವರು

ಹಲವಾರು ಸಮಾನ ಮನಸ್ಕ ಕಲಾವಿದರು ಸೇರಿ ೧೯೭೧ರಲ್ಲಿ "ಚಿತ್ರಕಲಾವಿದರ ಮಹಾ ಪರಿಷತ್ತು" ಉಗಮವಾಯಿತು. ಬಿ. ಶ್ರೀನಿವಾಸಮೂರ್ತಿಗಳು ಮಹಾಪರಿಷತ್ ಸಂಸ್ಥೆಯ ಸಂವಿಧಾನಿತ ರೂಪರೇಷೆಗಳನ್ನು ಸಿದ್ಧಪಡಿಸಿ ನೋಂದಣಿ ಮಾಡಿಸಿಕೊಟ್ಟರು. ಪ್ರಾರಂಭದಲ್ಲಿ ಕಲಾಮಂದಿರದ ಅ.ನ. ಸುಬ್ಬರಾವ್ ಅವರು ಅಧ್ಯಕ್ಷರಾಗಿ, ಹೆಚ್.ಎಸ್. ಇನಾಮತಿಯವರು ಕಾರ್ಯದರ್ಶಿಯಾಗಿ, ಕಲಾಮಂದಿರವೇ ಕಾರ್ಯಾಲಯವಾಯಿತು. ಕಲಾಪ್ರದರ್ಶನ ನಡೆಸಲು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಕೇಂದ್ರವಾಯಿತು. ಆಗ್ಗೆ ಆರ್.ವಿ. ಮಹಿಳಾ ಕಾಲೇಜಿನ ಪ್ರಾಂಶುಪಾಲರಾಗಿದ್ದ ಚಿ.ನ. ಮಂಗಳಾ ಅವರು ಮಕ್ಕಳಿಗೆ ಚಿತ್ರ ಮತ್ತು ಕುಶಲಕಲೆಗಳ ತರಗತಿ ನಡೆಸಲು ಒಂದು ಯೋಜನೆ ಸಿದ್ಧಪಡಿಸುವುದಕ್ಕೆ ಇನಾಮತಿಯವರನ್ನು ಆಹ್ವಾನಿಸಿದರು. ತತ್ಫಲವಾಗಿ ಮಕ್ಕಳಲ್ಲಿ ಚಿತ್ರಕಲೆಯ ಪ್ರಜ್ಞೆ ಬೆಳೆಯಲು ಆರಂಭವಾಗಿ, ಮಹಾಪರಿಷತ್ತಿನ ಮೂಲಕ ಸ್ಥಳದಲ್ಲೇ ಚಿತ್ರಬರೆಯುವ ಸ್ಪರ್ಧೆ ಪ್ರಾರಂಭವಾಯಿತು. ಹಾಗೆಯೇ ಕಾಲೇಜುಮಟ್ಟದ ಕಲಾಸ್ಪರ್ಧೆಯನ್ನು ನಡೆಸಲು ಇನಾಮತಿಯವರು ನಿರ್ಧರಿಸಿದರು. ಬೆಂಗಳೂರಿನ ಎಲ್ಲಾ ಕಾಲೇಜುಗಳಿಗೆ ಪತ್ರರವಾನಿಸಿ, ಅದರಲ್ಲೂ ಜಯನಗರ, ಬಸವನಗುಡಿ, ಹನುಮಂತನಗರ ಈ ಭಾಗದಲ್ಲಿರುವ ಶಾಲಾ ಕಾಲೇಜುಗಳಿಗೆ ತಾವೇ ಸ್ವತಃ ಹೋಗಿ ಅಲ್ಲಿನ ಪ್ರಾಚಾರ್ಯರನ್ನು ಕಂಡು, ಮಕ್ಕಳನ್ನು ಸ್ಪರ್ಧೆಗೆ ಕಳುಹಿಸುವಂತೆ, ವಾರಕ್ಕೊಮ್ಮೆಯಾದರೂ ಒಂದು ಗಂಟೆಯಾದರೂ ಚಿತ್ರಕಲಾ ಕಲಿಕೆಗೆ ಅವಕಾಶಮಾಡಿಕೊಡಿ ಎಂದು ಕೇಳಿಕೊಂಡರು. ಪ್ರಾರಂಭದಲ್ಲಿ ಬರುವವರ ಸಂಖ್ಯೆ ಕಡಿಮೆ ಎನಿಸಿದರೂ ಪ್ರತಿವರ್ಷ ಸ್ಪರ್ಧೆ ನಡೆಯುವಂತೆ ಮಾಡಿದುದರ ಪರಿಣಾಮ ಕ್ರಮೇಣ ಬರುವವರ ಸಂಖ್ಯೆ ಅಧಿಕಗೊಂಡಿತು. ಅದಕ್ಕಾಗಿಯೇ ರೋಲಿಂಗ್ ಷೀಲ್ಡ್‌ನ್ನು ಸಹ ಇಟ್ಟರು. ಯಾವ ಶಾಲೆಯಿಂದ, ಕಾಲೇಜಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೋ ಆ ಶಾಲೆಗೆ ವಿಶೇಷ ಬಹುಮಾನ ಘೋಷಿಸಿದರು. ಕಲಾಪ್ರಜ್ಞೆ ಬೆಳೆಯಲು ಇದರಿಂದ ಸಹಕಾರಿಯಾಯಿತು. ವರ್ಷದಿಂದ ವರ್ಷಕ್ಕೆ ಜನರ ಪ್ರತಿಕ್ರಿಯೆ ಉತ್ತಮಗೊಂಡಿತು.

ಇಂತಹ ಸನ್ನಿವೇಶಗಳನ್ನು ಉಪಯೋಗಿಸಿಕೊಂಡು ಶಾಲಾ ಕಾಲೇಜುಗಳಲ್ಲಿ ಬಹುಮಾನ ಪಡೆದ ಚಿತ್ರಗಳನ್ನು ಪ್ರದರ್ಶಿಸುವುದರ ಜೊತೆಗೆ, ಇನಾಮತಿ ಅವರು ಪ್ರಾತ್ಯಕ್ಷಿಕೆ ಮಾಡಿ ತೋರಿಸುತ್ತಿದ್ದರು. ಅಲ್ಲಿನ ಮುಖ್ಯೋಪಾಧ್ಯಾಯರನ್ನೇ ಬಳಸಿಕೊಂಡು ವಿಚಾರ ಸಂಕಿರಣ, ಉಪನ್ಯಾಸ ಏರ್ಪಡಿಸುತ್ತಾ ಬಂದರು. ಆಗ್ಗೆ ಯಾವ ಅಕಾಡೆಮಿಗಳೂ ಪೂರ್ಣ ಪ್ರಮಾಣದ ಅಸ್ತಿತ್ವ ಹೊಂದಿರಲಿಲ್ಲ. ಈಗಿನಂತೆ ರಾಜ್ಯ ಸರ್ಕಾರ ಸಂಸ್ಕೃತಿ ಇಲಾಖೆಗೆ ಕೋಟಿಗಟ್ಟಲೆ ಹಣ ಬಿಡುಗಡೆ ಮಾಡುತ್ತಿರಲಿಲ್ಲ. ಕಲಾವಿದರು ಅವರವರ



ಕಾಲಮೇಲೆ ಅವರೇ ನಿಲ್ಲುವ ಪ್ರಯತ್ನ ಮಾಡಬೇಕಾಗಿತ್ತು. ಸರ್ಕಾರದ ಪ್ರಶಸ್ತಿಗಳಂತೂ ಜನ್ಮತಾಳಿರಲಿಲ್ಲ. ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ತು ವಿದ್ಯುಕ್ತವಾಗಿ ಅಂದಿನ ವಿದ್ಯಾಸಚಿವರಾದ ಎ.ಆರ್. ಬದ್ರಿನಾರಾಯಣ ಅವರಿಂದ ಉದ್ಘಾಟನೆಗೊಂಡ ನಂತರ (೨೧.೫.೧೯೭೨) 'ಭಾರತದಲ್ಲಿ ಕಲೆ ಮತ್ತು ಕುಶಲಕಲೆ' ಕುರಿತಂತೆ ಚಲನಚಿತ್ರದ ಪ್ರಾತ್ಯಕ್ಷಿಕೆ, (೩೦.೬.೧೯೭೨) ಕಡಲತೀರದ ಭಾರ್ಗವ ಎಂದೇ ಖ್ಯಾತರಾದ ಡಾ॥ ಶಿವರಾಮ ಕಾರಂತರು ಬರೆದ 'ಕರ್ನಾಟಕದ ವಾಸ್ತು ಮತ್ತು ಶಿಲ್ಪ' ಮತ್ತು 'ಕರ್ನಾಟಕದ ಚಿತ್ರಕಲೆ' ಕುರಿತಂತೆ ವಿಚಾರ ಸಂಕಿರಣ, ಅದೇ ಸಂದರ್ಭದಲ್ಲಿ ಅವರನ್ನು ಅಭಿನಂದಿಸುವ ಕಾರ್ಯಕ್ರಮ (೯.೭.೧೯೭೨), ಖ್ಯಾತ ಪತ್ರಕರ್ತ ತಿ.ತಾ. ಶರ್ಮ ಅವರಿಂದ 'ಕರ್ನಾಟಕದ ವಾಸ್ತುಶಿಲ್ಪ ಮತ್ತು ಕಲೆ' ಕುರಿತ ಉಪನ್ಯಾಸ (೧.೮.೧೯೭೨) ಇತ್ಯಾದಿಗಳು ಏರ್ಪಟ್ಟವು.

ಇನಾಮತಿಯವರ ನಿತ್ಯ ಚಟುವಟಿಕೆಯ ದ್ಯೋತಕವಾಗಿ ೧೯೭೩ರಲ್ಲಿ ಕೆಲವು ಗಮನಾರ್ಹ ಕೆಲಸಗಳಾದವು. ಆರ್.ಎಸ್. ನಾಯಿಡು ಹಾಗೂ ವ್ಯಂಗ್ಯ ಚಿತ್ರಕಲಾವಿದ ಡೆಕ್ಕನ್ ಹೆರಾಲ್ಡ್‌ನ ಮೂರ್ತಿಯವರನ್ನು ಅಭಿನಂದಿಸಿದ್ದು ಹಾಗೂ ಸೋವಿಯತ್ ರಷ್ಯಾಕ್ಕೆ ಭಾರತದ ಕಲಾಪ್ರತಿನಿಧಿಯಾಗಿ ಹೋಗಲಿರುವ ಎಂ.ಟಿ.ವಿ. ಆಚಾರ್ಯರವರಿಗೆ ಹಾಗೂ ಇನ್ನೊಬ್ಬ ಮಹಾಪರಿಷತ್ತಿನ ಸದಸ್ಯರಾದ ಬೆಳಗಾಂನ ವಿ.ಸಿ. ಮಾಲಗತ್ತಿಯವರು ಭಾರತ ಸೇವಕ ಸಮಾಜದ ಆಶ್ರಯದಲ್ಲಿ ಯುನೈಟೆಡ್ ಕಿಂಗ್‌ಡಮ್, ಪ್ಯಾರಿಸ್, ಲಂಡನ್‌ಗಳಿಗೆ ಭೇಟಿಕೊಡುವುದಕ್ಕೆ ಹೋಗುವ ಪೂರ್ವಭಾವಿಯಾಗಿ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದುದು ಮುಖ್ಯವೆನಿಸುತ್ತವೆ. ಕರ್ನಾಟಕಾಂಧ್ರ ಸ್ನೇಹಸೇತುವೆಯಾಗಿ ನಡೆದ (೧೯೭೪) 'ತೆಲುಗು ಸಾಹಿತ್ಯ ಸಮ್ಮೇಳನ'ದಲ್ಲಿ ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ತಿನ ಕಾರ್ಯದರ್ಶಿಯಾಗಿದ್ದ ಇನಾಮತಿಯವರು ಆಂಧ್ರದ ಕಲಾವಿದರ ಕೃತಿಗಳನ್ನು ಆಹ್ವಾನಿಸಿ, ಕಲಾಪ್ರದರ್ಶನವನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಡಿಸಿದ್ದರು. ಆಗಿನ ಮುಖ್ಯಮಂತ್ರಿಗಳಾಗಿದ್ದ ದೇವರಾಜ್ ಅರಸರು ಉದ್ಘಾಟಿಸಿ ಅಭಿನಂದಿಸಿದ್ದು, ಹಾಗೆಯೇ ಭಾರತ ಮತ್ತು ಇಂಡೋ ಸೋವಿಯತ್ ಕಲ್ಚರಲ್ ಸೊಸೈಟಿಯ ಸ್ನೇಹಸೇತುವೆಯ

ಸಂಬಂಧವಾಗಿ ಬೆಂಗಳೂರಿನ ಬಸವನಗುಡಿಯಲ್ಲಿರುವ ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್‌ಕಲ್ಚರ್‌ನಲ್ಲಿ ಕಲಾ ಪ್ರದರ್ಶನವನ್ನು ಏರ್ಪಡಿಸಿದ್ದು, ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿ ಸದಸ್ಯರು ನಂತರ ಅಧ್ಯಕ್ಷರು ಆಗಿದ್ದ ವಿ.ಕೃ. ಗೋಕಾಕ್ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಕುಂಚಬ್ರಹ್ಮ ಎಂ.ವಿ. ಮಿಣಜಿಗಿ ಅವರನ್ನು ಸನ್ಮಾನಿಸಿದ್ದು (೧೯೭೬), ಹಾಗೂ ಮಹಾಪರಿಷತ್ತಿನ ಸ್ಥಾಪಕರಾದ ಪತ್ರಕರ್ತ ಬಿ. ಶ್ರೀನಿವಾಸಮೂರ್ತಿ ಅವರಿಗೂ ಸಂಸ್ಥೆಯ ಚೇತನಶಕ್ತಿಯಾದ ಅ.ನ.ಸುಬ್ಬರಾಯರಿಗೂ ಸನ್ಮಾನ ಏರ್ಪಡಿಸಿದುದು, (೧೯೭೬) ತದನಂತರದ ವರ್ಷದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಸಂದರ್ಭದಲ್ಲಿ ಚಿತ್ರಪ್ರದರ್ಶನ ಸಮಿತಿಯ ಮುಖ್ಯಸ್ಥರಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂತೆ ಕಲಾಪ್ರದರ್ಶನ ಏರ್ಪಡಿಸಿದುದು ಮುಖ್ಯವಾದ ಕಾರ್ಯಕ್ರಮಗಳು.

ಚಿತ್ರಕಲೆ, ಕರಕುಶಲಕಲೆ, ಶಿಲ್ಪ ಇವೆಲ್ಲವೂ ಒಂದಕ್ಕೊಂದು ಪೂರಕ ಹಾಗೂ ಪ್ರೇರಕ ಎಂದರಿತಿದ್ದ ಇನಾಮತಿಯವರು ಅವುಗಳಲ್ಲಿರುವ ಸಾಮ್ಯ, ಹೋಲಿಕೆ ಮಾಡುವ ವಿಧಾನ, ಅದಕ್ಕೆ ಬೇಕಾದ ಸಲಕರಣೆಗಳು ಇತ್ಯಾದಿ ವಿಷಯಗಳನ್ನು ಕಲಾಸಕ್ತರಿಗೆ ಪರಿಚಯಿಸಬೇಕೆಂಬ ಉತ್ಕಟ ಆಕಾಂಕ್ಷೆವುಳ್ಳವರಾಗಿದ್ದರು. ಅದನ್ನು ಕಾರ್ಯರೂಪಕ್ಕೆ ತರಲು ಬಹಳವಾಗಿ ಶ್ರಮಿಸುತ್ತಿದ್ದರು. ತತ್ಪರಿಣಾಮ ಶಿಲ್ಪಿ ವಾದಿರಾಜ ಅವರಿಂದ ಶಿಲಾಕೆತ್ತನೆ ಮಾಡುವ ವಿಧಿ ವಿಧಾನಗಳನ್ನು, ಕಲಾವಿದ ಎಸ್.ವಿ. ಸೋಮಸುಂದರಂ ಅವರಿಂದ ಕರಕುಶಲಕಲೆ ತಯಾರಿಕೆಯಲ್ಲಿ ಒಂದಾದ ಬೊಂಬೆಗಳನ್ನು ಮಾಡುವ ವಿಧಾನದ ಪ್ರಾತ್ಯಕ್ಷಿಕೆಯನ್ನು (೧೯೭೯) ಏರ್ಪಡಿಸಿ ಹಲವಾರು ಕಲಾಕಾಂಕ್ಷಿಗಳಿಗೆ ಮಾರ್ಗದರ್ಶಕರಾಗಿದ್ದರು. ಮಹಾಪರಿಷತ್ತಿನ ಸದಸ್ಯರಾದ ರಘೋತ್ತಮ ಪುಟ್ಟಿ, ಎನ್.ಎಸ್.ಎಸ್. ರಾವ್, ಎನ್.ಎಸ್.ಎಸ್. ಅಯ್ಯಂಗಾರ್, ಬಿ.ಜಿ.ಎಸ್. ಅಯ್ಯಂಗಾರ್ (೧೯೭೮), ಎಲ್. ಶಿವಲಿಂಗಪ್ಪ (೧೯೮೦), ಕೆ.ವಿ. ಸೂರ್ಯ (೧೯೮೧) ಇವರೆಲ್ಲರ ಏಕವ್ಯಕ್ತಿ ಕಲಾಪ್ರದರ್ಶನಗಳಿಗೆ ಮಹಾಪರಿಷತ್ತಿನ ಮೂಲಕ ಇನಾಮತಿಯವರು ಪೂರ್ಣ ಸಹಕಾರ ನೀಡಿದ್ದರು. ಪೂರ್ಣವಾಗಿ ತಮ್ಮದೇ ಏನೋ ಎಂಬಂತೆ ಭಾವಿಸಿ ಕೆಲಸ ಮಾಡುತ್ತಿದ್ದರು.

ಮಕ್ಕಳ ಚಿತ್ರಕಲಾ ಸ್ಪರ್ಧೆಯನ್ನು ಬೆಂಗಳೂರಿಗೆ ಮಾತ್ರ ಸೀಮಿತಗೊಳಿಸದೆ ಶಿವಮೊಗ್ಗ (೧೯೭೩), ಕೆ.ಜಿ.ಎಫ್. (೧೯೭೫), ಮೈಸೂರು (೧೯೭೮), ಬೆಂಗಳೂರಿನ ಹೊರವಲಯಗಳಾದ ರಾಮನಗರ, ಚೆನ್ನಪಟ್ಟಣ, ಹೊಸಕೋಟೆ ಇತ್ಯಾದಿಗಳೆಡೆಗಳಲ್ಲಿಯೂ ನಡೆದವು. ಅಲ್ಲಲ್ಲಿನ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರನ್ನು ಕಂಡು ಮಕ್ಕಳಿಗೆ ಅಲ್ಲೇ ಒಂದು ಚಿತ್ರರಚಿಸುವುದನ್ನು ತೋರಿಸಿ ಆಕರ್ಷಿಸುತ್ತಿದ್ದರು.

ಇನಾಮತಿಯವರ ಮತ್ತೊಂದು ದಾಖಲೆ ಕೆಲಸವೆಂದರೆ ೧೯೭೩ ರಿಂದ ೭೬ರವರೆಗೆ ಸತತವಾಗಿ ನಾಲ್ಕು ಸ್ಮರಣ ಸಂಚಿಕೆಗಳನ್ನು ತಂದರು. ಕಲೆಗೆ ಸಂಬಂಧಿಸಿದ ವಿಷಯಗಳನ್ನು ವಿವಿಧ ವಿದ್ವಾಂಸರುಗಳಿಂದ ಬರೆಸಿ, ಅಚ್ಚುಕಟ್ಟಾಗಿ ಮುದ್ರಿಸಿದ್ದಾರೆ. ಹೀಗೆ ಯಾವುದೇ ಕೆಲಸಕ್ಕೆ ಕೈಹಾಕಿದರೂ ಆಸಕ್ತಿಯಿಂದ ನಿರ್ವಹಿಸುತ್ತಿದ್ದರು.

೧೯೭೮ರಲ್ಲಿ ತಾವು ಕಟ್ಟಿದ ಸಂಸ್ಥೆಗೆ ಅಧ್ಯಕ್ಷರಾಗುವ ಯೋಗ ಕೂಡಿಬಂತು. ಅದುವರೆಗೆ ಅಧ್ಯಕ್ಷರಾಗಿದ್ದ ಅ.ನ. ಸುಬ್ಬರಾವ್ ಅವರು ವಯೋವೃದ್ಧತೆಯಿಂದಾಗಿ ತಿರುಗಾಡಲು ನಿಶ್ಶಕ್ತರಾದ ಕಾರಣ ತಮ್ಮ ಅಧಿಕಾರವನ್ನು ಇನಾಮತಿಯವರಿಗೆ ಹಸ್ತಾಂತರಿಸಿದರು. ಆದರೆ ಕೆಲಸಮಾಡಿ ಗೊತ್ತೇ ವಿನಃ ಅಧ್ಯಕ್ಷರೆಂಬ ಅಹಂ ಆಗಲಿ, ಬಿಗುಮಾನವಾಗಲಿ ಅವರಬಳಿಯಲ್ಲೇ ಇರಲಿಲ್ಲ. ಎಲ್ಲರೊಡನೆ ಒಂದಾಗಿ ಬೆರೆಯುವ ಗುಣ ಅವರದು. ತತ್ಫಲವಾಗಿ ಮುಂದೆ ಕಾರ್ಯದರ್ಶಿಯಾಗಿ ಬಂದವರಿಗೆ ಪೂರ್ಣ ಸಹಕಾರ ನೀಡುತ್ತಾ ಬಂದರು. ಮಹಾಪರಿಷತ್ತು ತದನಂತರದಲ್ಲಿ ವ್ಯಂಗ್ಯ ಚಿತ್ರಕಲಾವಿದ ವಿ. ಗೋಪಾಲ್ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನಕ್ಕೆ ಸಹಕಾರ ನೀಡಿತು. ಇನಾಮತಿಯವರು ಮೊದಲಿನಿಂದಲೂ ಕಲಾಬೆಳವಣಿಗೆ ಆಗಬೇಕಾದರೆ ಕೇವಲ ಬರೆಯುವುದರಿಂದ ಮಾತ್ರವೇ ಸಾಧ್ಯವಿಲ್ಲ. ಬರವಣಿಗೆಗೆ ಪೂರಕವಾದ ವಿಚಾರ ತಿಳಿದಿರಬೇಕೆಂಬ ಅಭಿಪ್ರಾಯವುಳ್ಳವರಾದ್ದರಿಂದ 'ಕಲಾಭಿವೃದ್ಧಿ ಮತ್ತು ಅನುಭವಗಳು' ಎಂಬ ವಿಚಾರ ಸಂಕಿರಣ ಏರ್ಪಡಿಸಿ, ತಾವೇ ಸ್ವತಃ ತಮಗಿಷ್ಟವಾದ ವಿಷಯವಾದ 'ಕಲಾವಿದನ ದೃಷ್ಟಿಯಲ್ಲಿ ನಿಸರ್ಗ' ಎಂಬ ವಿಷಯ ಕುರಿತು ಮಾತನಾಡಿದರು. ಇನ್ನಿತರ ವಿಷಯಗಳಾದ 'ಕಲೆ ಮತ್ತು ಬದುಕು', ಕುರಿತು ಅ.ನ.ಸು. ಅವರು, 'ಅನಾಟಮಿ ಮತ್ತು ಅದರ ಉಪಯುಕ್ತತೆ' ಕುರಿತು ಎಂ.ಟಿ.ವಿ. ಯವರು, 'ಕಲಾಬೆಳವಣಿಗೆ ಅಂದು-ಇಂದು' ಎಂಬ ವಿಷಯಕುರಿತು ಪ್ರೊ॥ ವಿ. ಸೀತಾರಾಮಯ್ಯನವರು ಮಾತನಾಡಿದರು. ಜೊತೆಗೆ ಕಲಾಪ್ರದರ್ಶನ ಸಹ ಏರ್ಪಡಿಸಿದ್ದರು.



ಅಕಾಡೆಮಿಗಳು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಸ್ವತಂತ್ರವಾಗಿ ಕಲಾಪ್ರದರ್ಶನವಾಗಲೀ, ಪ್ರಶಸ್ತಿ ವಿತರಣಾ ಸಮಾರಂಭವನ್ನಾಗಲೀ ಮಾಡುವಂತಾಗಿದ್ದವು. ೧೯೮೧ರಲ್ಲಿ ಅಕಾಡೆಮಿ ಪ್ರಶಸ್ತಿಯನ್ನು ಘೋಷಿಸಿ, ಸನ್ಮಾನ ಕಾರ್ಯಕ್ರಮ ನಡೆಸಿತ್ತು. ಈ ಸಂದರ್ಭವನ್ನು ಉಪಯೋಗಿಸಿಕೊಂಡು ಮಹಾಪರಿಷತ್ತಿನ ಸದಸ್ಯರುಗಳಾದವರಿಗೆ ಅಭಿನಂದನೆ ಸಲ್ಲಿಸಬೇಕೆಂದು ಚಿಂತಿಸಿ, ಎಂ.ಟಿ.ವಿ. ಆಚಾರ್ಯ, ಎಂ.ಎಸ್. ನಂಜುಂಡರಾವ್, ವ್ಹಿ.ಸಿ. ಮಾಲಗತ್ತಿ ಮತ್ತಿತರರುಗಳಿಗೆ ಮಹಾಪರಿಷತ್ತಿನ ಮೂಲಕ ಅಭಿನಂದನಾ ಸಮಾರಂಭ ಏರ್ಪಡಿಸಿದ ಕೀರ್ತಿ ಇನಾಮತಿ ಅವರಿಗೆ ಸಲ್ಲುತ್ತದೆ. ತದನಂತರದಲ್ಲಿ ಹದಿಮೂರು ಮಂದಿ ಯುವ ಕಲಾವಿದರ ಕಲಾಪ್ರದರ್ಶನವನ್ನು (೧೯೮೨) ಏರ್ಪಡಿಸಿದರು. ಆ ವೇಳೆಗಾಗಲೇ ಮಹಾಪರಿಷತ್ತಿನ ಸ್ಥಾಪಕ ಅಧ್ಯಕ್ಷರಾದ ಅ.ನ. ಸುಬ್ಬರಾವ್ ಅವರು ಬೆಂಗಳೂರಿನಲ್ಲೆ ಮರಣ ಹೊಂದಿದ್ದರು (೨೦.೫.೧೯೮೧). ಇನಾಮತಿ ಅವರಿಗೂ ಸೈಕಲ್ ಸವಾರಿ ಮಾಡುವ ಚೈತನ್ಯ ಕುಗ್ಗಿತ್ತು. ವಯಸ್ಸು ೭೫ನ್ನು ದಾಟಿತ್ತು. ಅಧ್ಯಕ್ಷ ಸ್ಥಾನವನ್ನು ಎಂ.ಟಿ.ವಿ. ಆಚಾರ್ಯರಿಗೂ, ಕಾರ್ಯದರ್ಶಿ ಸ್ಥಾನವನ್ನು ಯು.ಎಸ್. ವೆಂಕಟರಾಮನ್ ಅವರಿಗೂ, ಸಹಕಾರ್ಯದರ್ಶಿ ಸ್ಥಾನವನ್ನು ಎಲ್. ಶಿವಲಿಂಗಪ್ಪ ಅವರಿಗೂ ವಹಿಸಿಕೊಟ್ಟು ತಮ್ಮ ಗುರುತರವಾದ ಜವಾಬ್ದಾರಿಯಿಂದ ನಿವೃತ್ತಿ ಹೊಂದಿದರು. ಕಾರ್ಯಕ್ರಮ ಹಮ್ಮಿಕೊಂಡಾಗ ಪೂರ್ಣವಾಗಿ ಸಹಕರಿಸುತ್ತಿದ್ದರು. ತತ್ಫಲವಾಗಿ ಕರ್ನಾಟಕ, ಕೇರಳ ಗಡಿಭಾಗವಾದ ಕಾಸರಗೋಡಿನಲ್ಲಿ ಕಲಾಪ್ರದರ್ಶನ ಮಾಡಲಾಯಿತು (೧೯೮೩). ಇವೆಲ್ಲವೂ ಅವರ ಕಾರ್ಯ ಸಾಧನೆಯ ಹೆಗ್ಗುರುತುಗಳು.

ಮಹಾಪರಿಷತ್ತಿನ ಕಾರ್ಯಾಲಯವನ್ನು ಗಾಂಧಿನಗರದಲ್ಲಿನ ಎಂ.ಟಿ.ವಿ. ಅವರ ಆಚಾರ್ಯ ಚಿತ್ರಕಲಾಭವನಕ್ಕೆ ಸ್ಥಳಾಂತರಿಸಲಾಯಿತು. ಅಲ್ಲಿನ ವಿದ್ಯಾರ್ಥಿಗಳೆಲ್ಲಾ ಸದಸ್ಯರಾದರು. ನವಚೇತನ ಬಂದಿತು. ನಂತರದಲ್ಲಿ ಬೆಂಗಳೂರು ನಗರ ಕೈಗಾರಿಕಾ ಕಾರ್ಮಿಕರ ಚಿತ್ರಕಲಾ ಪ್ರದರ್ಶನವನ್ನು ಮಾಡಲಾಯಿತು. ಉತ್ತಮ ಕಲಾಕೃತಿಗಳ ಆಯ್ಕೆ ಮತ್ತು ತೀರ್ಪುಗಾರರಾಗಿ ಇನಾಮತಿಯವರು ಕಾರ್ಯನಿರ್ವಹಿಸಿದರು. ದಸರಾ ಮತ್ತು ಪ್ರದರ್ಶನ ಸಮಿತಿಗಳಲ್ಲೂ ಸಹ ಅನೇಕ ವರ್ಷ ತೀರ್ಪುಗಾರರಾಗಿದ್ದರು. ಚಿತ್ರಕಲೆಯಲ್ಲಿ ಉತ್ತಮ ಕಲಾಸಾಧನೆ ಮಾಡುವವರಿಗೆ "ಚಿತ್ರಕಲಾ ಭೂಷಣ" ಎಂಬ ಪ್ರಶಸ್ತಿ ನೀಡಲೂ ಸಹ ನಿರ್ಧರಿಸಿ, ಪ್ರಥಮವಾಗಿ ರಘೋತ್ತಮ ಪುಟ್ಟಿ, ಎನ್.ಎಸ್.ಎಸ್. ಅಯ್ಯಂಗಾರ್ ಅವರಿಗೆ (೧೯೮೭) ನೀಡಲಾಯಿತು.



ಈ ಕರ್ನಾಟಕ ಚಿತ್ರಕಲಾವಿದರ ಮಹಾಪರಿಷತ್ತಿನ ಸ್ಥಾಪಕ ಅಧ್ಯಕ್ಷರಾದ ಅ.ನ. ಸುಬ್ಬರಾವ್, ಕಾರ್ಯದರ್ಶಿಯಾದ ಎಚ್.ಎಸ್. ಇನಾಮತಿಯವರ ವಿಶೇಷ ಗುಣವೆಂದರೆ ಸೈಕಲ್‌ನಲ್ಲೇ ಸುತ್ತಾಡಿ ಸಂಸ್ಥೆ ಕಟ್ಟಿದ್ದು. ಆಯಾಸ, ಆಲಸ್ಯ ಎಂಬುದು ಅವರ ಬಳಿ ಸುಳಿಯುತ್ತಲೇ ಇರಲಿಲ್ಲವೇನೊ ಎಂಬಂತೆ ಅವರುಗಳ ಲವಲವಿಕೆ, ಉತ್ಸಾಹ ಯುವಕರನ್ನು ನಾಚಿಸುವಂತಿತ್ತು. ಈಗಿನ ಹಾಗೆ ನೆರಳು ಪ್ರತಿ (Xerox), ದೂರವಾಣಿ, ಮೊಬೈಲ್ ಮುಂತಾದ ಆಧುನಿಕ ಸೌಲಭ್ಯಗಳು ಇಲ್ಲದ ಕಾರಣ ಪ್ರತಿತಿಂಗಳು ಕರೆಯುವ ಸಭೆಯ ತಿಳುವಳಿಕೆ ಪತ್ರವನ್ನು ಅಂಚೆ ಕಾರ್ಡಿನ ಮೂಲಕವೇ ಬರೆದು ಕಳಿಸುತ್ತಿದ್ದರು. ವರ್ಷದ ಮಹಾಸಭೆಗೂ ಸಹ ಕೈಯಲ್ಲಿ ಬರೆದ ಅಂಚೆ ಕಾಗದವೆ. ಒಂದಲ್ಲಾ ಎರಡಲ್ಲಾ ನೂರಾರು ಅಂಚೆ ಕಾಗದಗಳನ್ನು ಬರೆಯುತ್ತಿದ್ದ ಅವರ ತಾಳ್ಮೆ ಶ್ರದ್ಧೆ ಎಂದೆಂದೂ ನೆನೆಸುವಂತಹದ್ದು. ಕಾರ್ಯಕ್ರಮ, ಸ್ಪರ್ಧೆ ನಡೆಸಲು ಪ್ರಾಯೋಜಕರನ್ನು, ಬಹುಮಾನ ಕೊಡುವ ದಾನಿಗಳನ್ನು ಹುಡುಕುವಲ್ಲಿ ಅವರ ಶ್ರಮ ಸಾಧನೆ ಅನನ್ಯ. ಅಸಂಘಟಿತ ಕಲಾವಿದರನ್ನು ಒಂದೆಡೆ ಸೇರಿಸುವ ಯತ್ನದಲ್ಲಿ ಇನಾಮತಿಯವರದು ಗಣನೀಯ ಪಾತ್ರ.

ಇನಾಮತಿಯವರು ಪ್ರಶಸ್ತಿ ಪುರಸ್ಕಾರಗಳಿಗಾಗಿ ಸರ್ಕಾರದ ಬೆನ್ನು ಹತ್ತಿದವರಲ್ಲ. ಹಾಗೆ ಹೋಗುವುದು ಸರಿಯಲ್ಲ ಎಂಬುದು ಅವರ ವಾದ. ಜನರಿಂದ ಅಥವಾ ಸಂಬಂಧಿಸಿದ ಅಧಿಕಾರಿಗಳು, ಸರ್ಕಾರ ಗುರುತಿಸಿಕೊಡಬೇಕೆಂಬುದು ಅವರ ಅಭಿಮತವಾಗಿತ್ತು. ಹಾಗೆಯೇ ಕೊನೆವರೆಗೂ ನಡೆದುಕೊಂಡರು. ತಮ್ಮ ೬೦ನೇ ವರ್ಷದ ಹುಟ್ಟಿದಹಬ್ಬವನ್ನು ಸಹ ಅತ್ಯಂತ ಸರಳರೀತಿಯಿಂದ ಕೆಲವೇ ಮಿತ್ರರಿಗೆ ತಿಳಿಸಿ ಆಚರಿಸಿಕೊಂಡರು. ಕಾಲಕ್ರಮದಲ್ಲಿ ಈ ವಿಚಾರ ಸಾರ್ವಜನಿಕವಾಗಿ ತಿಳಿದು ಇನಾಮತಿಯವರಿಗೆ ಅರವತ್ತಾಗಿದೆಯೆ! ಎಂದು ಅಚ್ಚರಿಪಟ್ಟವರು ಉಂಟು. ಕಾರಣ ಹುಡುಗನಿಗಿಂತ ಚುರುಕಾಗಿ ಸೈಕಲ್ ತುಳಿಯುತ್ತಿದ್ದರು. ನಡಿಗೆಯಲ್ಲಿ ಹಾಗೂ ತಾವು ಒಪ್ಪಿಕೊಂಡ ಕೆಲಸಗಳನ್ನು ಮಾಡುವುದರಲ್ಲಿ ಯುವ ಜನಾಂಗವನ್ನು ಮೀರಿಸುವ ಉತ್ಸಾಹ ತೋರುತ್ತಿದ್ದರು. ಇವೆಲ್ಲವನ್ನು ಹತ್ತಿರದಿಂದ ಕಂಡವರಿಗೆ ೬೦ ತುಂಬಿದೆ ಎಂಬುದನ್ನು ಒಪ್ಪುತ್ತಲೇ ಇರಲಿಲ್ಲ. ಅವರ ದೈಹಿಕ ಚಟುವಟಿಕೆ ಏನೇ ಇರಲಿ, ೬೦ರ ವರ್ಷಾಚರಣೆ ನಂತರ ಇತರ ಸಂಘ ಸಂಸ್ಥೆಗಳು ಗೌರವಿಸಲು ಆರಂಭಿಸಿದವು.



ಮುಖ್ಯವಾಗಿ ಹೇಳಬಹುದಾದ ಖಾಸಗಿ ಸಂಸ್ಥೆಗಳಾದ ಜ್ಞಾನಜ್ಯೋತಿ ಕಲಾಮಂದಿರ ಮತ್ತು ಇಂಡಿಯನ್ ಇನ್ಸಿಟ್ಯೂಟ್ ಆಫ್ ವರ್ಲ್ಡ್‌ಕಲ್ಚರ್ ಸಂಸ್ಥೆಗಳು ಒಗ್ಗೂಡಿ ೧೯೭೦ನೇ ಜನವರಿ ೨೦ರಂದು ಅದೇ ವರ್ಲ್ಡ್‌ಕಲ್ಚರ್ ಆವರಣದಲ್ಲಿ ಇನಾಮತಿಯವರ ಚಿತ್ರಗಳ ಪ್ರದರ್ಶನ ಮಾಡಿದುದಲ್ಲದೆ, ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಸನ್ಮಾನವನ್ನು ಸಹ ಮಾಡಿದರು. ಆ ಸಂದರ್ಭದಲ್ಲಿ ನಾಡಿನ ಖ್ಯಾತ ವಿದ್ವಾಂಸರಾದ ಪ್ರೊ. ಎಸ್.ಕೆ. ರಾಮಚಂದ್ರರಾವ್, ತಿ.ತಾ. ಶರ್ಮ, ಅರ್ಚಕ ವೆಂಕಟೇಶರವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿ ಇನಾಮತಿಯವರ ಕಲಾಸಾಧನೆ, ಸಾಂಸ್ಥಿಕ ಚಟುವಟಿಕೆ ಕುರಿತು ಮಾತನಾಡಿದರು. ಅರಣ್ಯ ಶಾಖೆಯ ರಾಜ್ಯ ಸಚಿವರಾದ ಆಲೂರು ಹನುಮಂತಪ್ಪನವರು ಇನಾಮತಿಯವರ ಕಲಾಕೃತಿಗಳ ಪ್ರದರ್ಶನವನ್ನು ಉದ್ಘಾಟಿಸಿದರು. ಕೆನರಾ ಬ್ಯಾಂಕ್‌ನ ಕಸ್ಟೋಡಿಯನ್ ಕೆ.ಪಿ.ಜೆ. ಪ್ರಭು ಅವರು ಸನ್ಮಾನಪತ್ರ ಮತ್ತು ನೆನಪಿನ ಕಾಣ್ಕೆ ನೀಡಿ ಇನಾಮತಿಯವರನ್ನು ಅಭಿನಂದಿಸಿದರು.

ತದನಂತರದಲ್ಲಿ (೧೮.೨.೧೯೭೦) ಮೈಸೂರು ಪ್ರದೇಶ ಚಿತ್ರಕಲಾ ಪರಿಷತ್ತು ಅಂದರೆ ಈಗ ಕರ್ನಾಟಕ ಚಿತ್ರಕಲಾ ಪರಿಷತ್ತು ಎಂದು ಕರೆಯುವ ಈ ಸಂಸ್ಥೆಯು ತನ್ನ ೧೦ನೇ ವರ್ಷದ ವಾರ್ಷಿಕೋತ್ಸವವನ್ನು ಬ್ಯಾಂಕ್ವೆಟ್ ಹಾಲಿನಲ್ಲಿ ಆಚರಿಸಿದ ಸಂದರ್ಭದಲ್ಲಿ ರಾಜ್ಯದ ಹಿರಿಯ ಕಲಾವಿದರಾದ ಎಚ್.ಎಸ್. ಇನಾಮತಿಯವರು ಸೇರಿದಂತೆ ವೈ. ಸುಬ್ರಮಣ್ಯರಾಜು, ರುಮಾಲೆ ಚೆನ್ನಬಸವಯ್ಯ, ಎಸ್.ಆರ್. ಅಯ್ಯಂಗಾರ್, ಟಿ.ಪಿ. ಅಕ್ಕಿ ಇವರುಗಳನ್ನು ಅಂದಿನ ಹಣಕಾಸು ಮಂತ್ರಿಗಳಾಗಿದ್ದ ರಾಮಕೃಷ್ಣ ಹೆಗಡೆಯವರ ಸಮ್ಮುಖದಲ್ಲಿ ಸನ್ಮಾನ ಪತ್ರ ಅರ್ಪಿಸಿ, ಗೌರವ ಸಲ್ಲಿಸಲಾಯಿತು. ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲರು ಸಹ ಬೇರೊಂದು ಸಂದರ್ಭದಲ್ಲಿ ಶಾಲುಹೊದಿಸಿ ಸನ್ಮಾನಿಸಿದರು. ಎಲ್ಲಾ ಪತ್ರಿಕಾ ಮಾಧ್ಯಮಗಳಲ್ಲಿ ಪ್ರಚುರಪಡಿಸಲಾಯಿತು.

ಇಂತಹದ್ದೇ ಸಾಮೂಹಿಕವಾಗಿ ತಮ್ಮ ಕಲಾ ಮತ್ತು ಸಾಹಿತ್ಯ ಮಿತ್ರರುಗಳೊಡನೆ ಪ್ರಶಸ್ತಿ ಪಡೆಯುವ ಸಂದರ್ಭ ಒದಗಿದ್ದು ೧೯೭೪ನೇ ಇಸವಿ ಜನವರಿ ೨೩ ರಂದು. ಆಗ್ಗೆ ಅಕಾಡೆಮಿಗಳು ಈಗಿನಂತೆ ಹೆಚ್ಚಿನ ಪ್ರಮಾಣದಲ್ಲಿರಲಿಲ್ಲ. ಸಾಹಿತ್ಯ ಅಕಾಡೆಮಿ ಮತ್ತು ಲಲಿತಕಲಾ ಅಕಾಡೆಮಿಗಳು ಪ್ರಚಲಿತದಲ್ಲಿದ್ದವು. ಪ್ರಶಸ್ತಿ ವಿತರಣಾ ಸಮಾರಂಭವನ್ನು ಒಟ್ಟಾಗಿ ಆಚರಿಸುತ್ತಿದ್ದವು.




೧೯೭೩ನೇ ಸಾಲಿನ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಸರ್ವಶ್ರೀ ಎಂ.ವಿ. ಸೀತಾರಾಮಯ್ಯ, ಮೈಸೂರು ಮಲ್ಲಿಗೆಯ ಕವಿ ಕೆ.ಎಸ್. ನರಸಿಂಹಸ್ವಾಮಿ, ಕಾದಂಬರಿ ಕ್ಷೇತ್ರದಲ್ಲಿ ಹೆಸರು ಮಾಡಿದ್ದ ಕೃಷ್ಣಮೂರ್ತಿ ಪುರಾಣಿಕ್, ಸಂಸ್ಕೃತದ ವಿದ್ವತ್ತನ್ನು ಕನ್ನಡಕ್ಕೆ ತಂದ ಡಾ. ಕೆ. ಕೃಷ್ಣಮೂರ್ತಿ ಇವರುಗಳಿಗೆ, ಲಲಿತಕಲಾ ಅಕಾಡೆಮಿಯಿಂದ ಚಿತ್ರಕಲೆಯಲ್ಲಿ ಅತ್ಯುತ್ತಮ ಸಾಧನೆಗೈದ ಎಚ್.ಎಸ್. ಇನಾಮತಿ, ಸ್ವಾತಂತ್ರ್ಯಯೋಧ, ಶಿಲ್ಪಿ, ವಿಚಾರವಾದಿ ಎನಿಸಿದ ಆರ್.ಎಸ್. ನಾಯಿಡು, ಅರಮನೆ ಕಲಾವಿದ ವೈ. ಸುಬ್ರಮಣ್ಯರಾಜು, ನವ್ಯಶಿಲ್ಪಿ ನಾರಾಯಣ ಕುಲಕರ್ಣಿ ಇವರುಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು (೨೩.೧.೧೯೭೪).

ಮಹಾಪರಿಷತ್ತಿನ ಬೆಳವಣಿಗೆಗಾಗಿ ಅಹರ್ನಿಶಿ ದುಡಿದ ಇನಾಮತಿ ಅವರಿಗೆ ಸದಸ್ಯರೆಲ್ಲರೂ ಅತ್ಯಂತ ಅಭಿಮಾನದಿಂದ ಗೌರವವನ್ನು, ಸನ್ಮಾನ ಪತ್ರವನ್ನು ಅರ್ಪಿಸಿ ವಂದನೆ ಸಲ್ಲಿಸಿದರು (೨೧.೩.೧೯೮೨). ಎಪ್ಪತ್ತೆಂಟು ವಸಂತಗಳನ್ನು ಸೈಕಲ್ ತುಳಿದುಕೊಂಡೇ ತಿರುಗಾಡಿದ ಈ ತರುಣ ಸೈಕಲ್ ವೀರರಿಗೆ ಅವರ ಸ್ನೇಹಿತರು ಒತ್ತಾಯ ಪೂರ್ವಕವಾಗಿ ಸೈಕಲ್ ತುಳಿಯುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದರು. ತತ್ಪರಿಣಾಮ ಕೊನೆಯ ಒಂದೆರಡು ವರ್ಷ ಮಾತ್ರ ಕಾಲ್ನಡಿಗೆಯಲ್ಲಿ ತಿರುಗಾಡುತ್ತಾ ಇಲ್ಲವೇ, ಆಟೋ ಹಿಡಿದು ಓಡಾಡುತ್ತಿದ್ದರು.

ಯಾವಾಗಲೂ ಕಚ್ಚೆ ಪಂಚೆ, ಬಿಳಿ ಜುಬ್ಬಾ, ಕಾಲಲ್ಲಿ ಸಾಧಾರಣ ಚಪ್ಪಲಿ, ಮೀಸೆ ಕಾಣದ ಮುಖ, ಹಿಂಬಾಚಿದ ತಲೆ ಕೂದಲುಳ್ಳ ಅತ್ಯಂತ ಸರಳ ಸಜ್ಜನ ಕಲಾವಿದರಾದ ಎಚ್.ಎಸ್. ಇನಾಮತಿಯವರು ತಮ್ಮ ೮೦ನೇ ವಯಸ್ಸಿನಲ್ಲಿ (೧೧.೮.೧೯೮೬) ಇಹಲೋಕ ತ್ಯಜಿಸಿ ಅಮರರಾದರು.

ಪ್ರೊ. ಎಸ್.ಕೆ. ರಾಮಚಂದ್ರರಾವ್ ಅವರು ಸನ್ಮಾನ ಸಂದರ್ಭದಲ್ಲಿ ಪತ್ರಿಕೆಯೊಂದಕ್ಕೆ (ಪ್ರಜಾವಾಣಿ) ಲೇಖನ ಬರೆಯುತ್ತಾ "ಇನಾಮತಿಯವರು ಇತರ ಜಾಣ ಕಲಾವಿದರಂತೆ ಅವರು ಶೈಲಿಯಲ್ಲಾಗಲೀ, ನಿಷ್ಠೆಯಲ್ಲಾಗಲೀ ಮಾರ್ಪಾಡು ಮಾಡಿಕೊಳ್ಳಲಿಲ್ಲ. ಸಂಪ್ರದಾಯವನ್ನು ಬಿಟ್ಟು ನವ್ಯತೆಯನ್ನು ವರಿಸಲಿಲ್ಲ. ಗೆದ್ದ ಎತ್ತಿನ ಬಾಲ ಹಿಡಿಯಲಿಲ್ಲ. ಹೀಗಾಗಿ ಅವರ ಕಲೆಗಾರಿಕೆ ಜನರ ಗಮನಕ್ಕೆ ಅಷ್ಟಾಗಿ ಬರಲಿಲ್ಲ. ಕೀರ್ತಿಗಾಗಿ ಅಥವಾ ಹಣಕ್ಕಾಗಿ ಅವರು ಶ್ರಮಿಸದೆ ತಮ್ಮ ಅಭಿರುಚಿಯನ್ನು ಆಧ್ಯಾತ್ಮದ ಕಡೆಗೆ ತಿರುಗಿಸಿದುದು ಅವರ ವ್ಯಕ್ತಿತ್ವದ ವೈಶಿಷ್ಟ್ಯ" ಎಂದು ಬರೆಯುವಲ್ಲಿ ಅವರ ಹಿರಿಮೆ ಗರಿಮೆ ಅಡಗಿದೆ.

ಕೆಲವು ಕಲಾಕೃತಿಗಳ ವಿವರ:



ದೊಡ್ಡ ಆಲದ ಮರ

ಇದರ ಚಿತ್ರರಚನೆಯ ವಿಧಾನವೇ ಅತಿ ಸರಳವಾಗಿದೆ. ಆಲದಮರದ ನೈಜವರ್ಣ ತರುವ ಸಾಹಸದ ಬದಲಾಗಿ ಆಲದ ಮರದ ಬುಡದಲ್ಲಿ ಕಾಣುವ ಬಿಳಲುಗಳು, ಜೊತೆಯಲ್ಲಿ ರೆಂಬೆಯಲ್ಲಿನ ಎಲೆಗಳ ಗುಂಪಿನ ಆ ನೋಟಕ್ಕೆ ಅನುಗುಣವಾಗಿ ಸೀಸದ ಕಡ್ಡಿಯಿಂದ ರೇಖಿಸಿ, ಕಾಗದದ ಮೇಲೆ (Hand made paper) ನೀರನ್ನು ಸಮತಟ್ಟಾದ ಕುಂಚದಿಂದ (Flat Brush) ಹಾಕಿ, ಅದು ಪೂರ್ಣ ಒಣಗುವ ಮುನ್ನವೇ ಬೆಳಕಿನ ಭಾಗಕ್ಕೆ ಹಳದಿಯನ್ನು, ಅರೆ ಬೆಳಕಿನ ಭಾಗಕ್ಕೆ ಮಬ್ಬಾದ ಹಳದಿಯನ್ನು (Yello ochre) ಹರಿಯ ಬಿಟ್ಟು ಅದು ತೇವಾಂಶವಿದ್ದಾಗಲೇ ಎಲೆಗಳ ಗುಂಪಿನ ಭಾಗಕ್ಕೆ ಹಸಿರನ್ನು ಸಿಂಪಡಿಸಿದಂತೆ ದುಂಡು ಕೂದಲಿನ ಕುಂಚದಿಂದ (Round bursh) ಅಲ್ಲಲ್ಲಿ ಹಾಕಿ ಮರದ ಮೋಹಕತೆ ತಂದಿದ್ದಾರೆ. ದುಂಡುತನ ಕಾಣಲು, ಹಾಗೆಯೇ ಬೆಳಕು ನೆಳಲುಗಳ ಚೆಲ್ಲಾಟಕಾಣಲು ನೇರಳೆ ಬಣ್ಣ ಬಳಸಿ, ವೈವಿಧ್ಯತೆ ಕಾಣುವಂತೆ ಕೇವಲ ಮೂವತ್ತು ನಿಮಿಷಗಳ ಅವಧಿಯಲ್ಲಿ ರಚಿಸಿರುವ ಈ ಚಿತ್ರ ಕಲಾವಿದನ ಕಣ್ಗೆ ಕಾಣುವ ಆ ತಕ್ಷಣದ ಬಿಂಬದಂತೆ ಭಾಸವಾದರೂ ರಚನಾ ತಂತ್ರಮನೋಜ್ಞ.

BIG BANIYAN TREE

